ಅಚಲ

ಬಿಡಿಪ್ರತಿ : 4 ರೂ.

ತಿಂಗಳ ಪತ್ರಿಕೆ

ಮಾರ್ಚ್ - ಏಪ್ರಿಲ್ 2007

ಒಳಗೇನಿದೆ

- ದಾಳ (ಕತೆ) -ಗೀತಾ ನಾಗಭೂಷಣ
- ಬಯಕೆ (ಕವನ) -ಎಂ. ಎಸ್. ವೇದಾ
- ಹೊಮ್ಮೈ ವ್ಯಾರಾವಾಲ -ಟಿ. ಎಸ್. ಸತ್ಯನ್
- ಜನವಾದಿಯ ಬೆಳ್ಳಿಯ ಸಂಭ್ರಮ -ಕೆ. ಎಸ್. ವಿಮಲ

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ,

ಬೆಂಗಳೂರು

ಅಚಲ

ಸಂಪುಟ - 22 ಸಂಚಿಕೆ : 3 ಮತ್ತು 4

ಪ್ರಕಾಶಕರು
ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ,
ಬೆಂಗಳೂರು

ಚಂದಾ ಹಣವನ್ನು ಚೆಕ್‌ನಲ್ಲಿ ಕಳುಹಿಸುವವರು ಬ್ಯಾಂಕ್ ಕಮೀಷನ್ ಸೇರಿಸಿ ಕಳುಹಿಸಬೇಕು. ಎಂ. ಓ. ಫಾರ್ಮಿನ ಕೊನೆಯ ಭಾಗದಲ್ಲಿ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ನಮೂದಿಸಬೇಕು. ಬದಲಾದ ವಿಳಾಸವನ್ನು ದಯವಿಟ್ಟು ಬರೆದು ತಿಳಿಸಿ.

Achala - Edited by Dr. N. Gayathri

Published by Dr. G. Ramakrishna on behalf of Jagruthi Mahila Adhyayana Kendra

Printed at
Lipi Mudrana
Bangalore - 560 004

Statement about ownership and other Particulars about newspaper ACHALA-Form IV (See Rule 8)

1. Place of Publication	:	Bangalore, Karnataka State
2. Periodicity of Publication	:	Monthly
3. Printer's Name, Address	:	**Lipi Mudrana** Basavanagudi, Bangalore-4
4. Publisher's Name	:	**Dr. G. Ramakrishna** for Jagruthi Mahila Adhyayana Kendra, Bangalore
Nationality	:	Indian
Address	:	108, Skyline Surabhi, 14-P, Vidyapeeta Raod, B.S.K. III Stage, Bangalore - 560 085
5. Editor's Name	:	Dr. N. Gayathri 108, Skyline Surabhi, 14-P, Vidyapeeta Raod, B.S.K. III Stage, Bangalore - 560 085
6. Name & Address of Individuals who own the news paper	:	**Jagruthi Mahila Adhyayana Kendra** 108, Skyline Surabhi, 14-P, Vidyapeeta Raod, B.S.K. III Stage, Bangalore - 560 085

I, G. Ramakrishna, here by declare that the particular given above are true to the best of my knowledge and belief.

Bangalore
25-3-2007

sd/-
G. Ramakrishna

ಮತ್ತೆ ಬಂದಿದೆ ಮಹಿಳಾ ದಿನ

ಮಾರ್ಚ್ ತಿಂಗಳು ಬಂತೆಂದರೆ ಮಹಿಳೆಯರ ಬಗೆಗಿನ ಕಾಳಜಿಗಳು ಉದ್ದುದ್ದ ಭಾಷಣಗಳು, ಸನ್ಮಾನ ಕಾರ್ಯಕ್ರಮಗಳು, ಕೆಲವೊಮ್ಮೆ ಪ್ರತಿಭಟನೆಗಳ ಮಹಾಪೂರವೇ ಹರಿದು ಬರುತ್ತದೆ. ಮಾರ್ಚ್ 8, ಅಂತರ್‌ರಾಷ್ಟ್ರೀಯ ಮಹಿಳಾ ದಿನ ಹೆಣ್ಣಿನ ಹೋರಾಟ ಮತ್ತು ಆ ಹೋರಾಟದ ಜಯವನ್ನು ಸಂಕೇತಿಸುವ ದಿನ. ಈ ಬಾರಿಯೂ ಇದು ತನ್ನೆಲ್ಲಾ ವೈವಿಧ್ಯ ಮತ್ತು ವೈಭವಗಳಿಂದ ಆಚರಿಸಲ್ಪಟ್ಟಿತು.

ಕರ್ನಾಟಕದ ದುಡಿಯುವ ಮಹಿಳೆಯರ ಬೃಹತ್ ಸಂಘಟನೆಗಳಲ್ಲೊಂದಾದ ರಾಜ್ಯ ಸರಕಾರಿ ನೌಕರರು ಆಚರಿಸಿದ ಮಹಿಳಾ ದಿನದಲ್ಲಿ ಅತಿಥಿಗಳಾಗಿ ಭಾಗವಹಿಸಿದ ಮಂತ್ರಿ ರಾಮಚಂದ್ರೇಗೌಡರು ಮಾತಾಡಿದ ವೈಖರಿ ಮಹಿಳಾ ದಿನಾಚರಣೆಯ ಅರ್ಥವಂತಿಕೆಯನ್ನು ಪ್ರಶ್ನಿಸುತ್ತದೆ: "ಹೆಣ್ಣಿಗೆ ಮಾತೃಸ್ಥಾನವನ್ನು ಕೊಟ್ಟು ದೈವತ್ವಕ್ಕೇರಿಸುವ ನಮ್ಮ ಸಂಸ್ಕೃತಿಯಲ್ಲಿ ಪಿತೃದೇವನನ್ನು ಮಾತೃವಿನ ನಂತರವೇ ಸ್ಮರಿಸುವುದು. ಆದರೆ ತಾಯಿಯರು ಮಾತ್ರ ವರದಕ್ಷಿಣೆ ಯಂತಹ ಸಮಸ್ಯೆಗಳಿಗೆ ಕಾರಣರಾಗಿ ತಮ್ಮ ಗಂಡು ಮಕ್ಕಳನ್ನು ಪ್ರೋತ್ಸಾಹಿಸುತ್ತಾರೆ... ಸಹಜವಾಗಿ ಜೈವಿಕವಾಗಿ ದುರ್ಬಲರಾಗಿರುವ ಮಹಿಳೆಯರು ತಮ್ಮ ಸಮಸ್ಯೆಗಳ ಪರಿಹಾರಕ್ಕೆ ಧರಣಿ, ಚಳುವಳಿ ಮುಂತಾದ ಒರಟು ಮಾರ್ಗಗಳನ್ನು ಅನುಸರಿಸದೆ ಕೋಮಲವಾಗಿ ಸ್ಪಂದಿಸಬೇಕು. ಎಲ್ಲ ಸಮಸ್ಯೆಗಳ ಪರಿಹಾರವೂ ಪ್ರೀತಿಯಲ್ಲಿ ಅಡಗಿದೆ" ಎಂದು ಫರ್ಮಾನು ಕೊಟ್ಟಿದ್ದಾರೆ. ಇಂತಹ ಪ್ರತಿಕ್ರಿಯೆಗಳು ಮಹಿಳಾ ಹೋರಾಟಗಾರರಿಗೆ ಹೊಸದೇನಲ್ಲ. ಗಂಡಂದಿರು ಜೂಜು, ಕುಡಿತದಿಂದ ವಿಮುಖರಾಗಲು ಹೆಂಡತಿಯರು ಅವರನ್ನು ಪ್ರೀತಿಯಿಂದ ಒಲಿಸಿ ಸರಿದಾರಿಗೆ ತರಬೇಕೆಂದು ಮಹಿಳಾದಿನದ ಭಾಷಣದಲ್ಲೇ ನಮ್ಮ ಹಿಂದಿನ ಸರ್ಕಾರದ ಮುಖ್ಯ ಮಂತ್ರಿಯೊಬ್ಬರು ಆದೇಶಿಸಿದ್ದರು. ಆದರೆ ಅಧಿಕಾರದ ನೆಲೆಯಲ್ಲಿರುವ ಎಲ್ಲರಿಗೂ ಹೆಂಗಸರು ತಮ್ಮ ಯೋಜನೆಗಳ ಫಲಾನುಭವಿಗಳು ಮತ್ತು ತಮ್ಮ ಓಟಿನ ಬ್ಯಾಂಕುಗಳಾಗಿ ಮಾತ್ರ ಕಾಣುತ್ತಿರುತ್ತಾರೆ. ಅವರಿಂದ ನಿಜವಾದ ಪರಿಹಾರ ಸಿಗುವುದು ಕಷ್ಟವೇ.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಪರಿಕಲ್ಪನೆಯನ್ನು ಗ್ರಹಿಸುವುದರಲ್ಲಿಯೇ ನಿಜವಾದ ಸಮಸ್ಯೆ ಉದ್ಭವಿಸುತ್ತಿದೆ. ಮಹಿಳೆಯರು ತಮ್ಮ ದಿನನಿತ್ಯದ ಬದುಕಿನ ಜಂಜಾಟದಲ್ಲಿ ಮತ್ತು ದುಡಿಯುವ ವ್ಯವಸ್ಥೆಯಲ್ಲಿ ಹತ್ತು ಹಲವು ಸಮಸ್ಯೆಗಳನ್ನು ಪರಿಹರಿಸಿಕೊಳ್ಳುತ್ತಾ, ತಮ್ಮ ವ್ಯಕ್ತಿತ್ವಕ್ಕೊಂದು ಅರ್ಥ ಮತ್ತು ಘನತೆಯನ್ನು ಕಂಡುಕೊಳ್ಳಬೇಕಾದ ಅಗತ್ಯವನ್ನು ನೆನಪಿಸುವ ದಿನ ಯಾವುದೇ ಕೀಳರಿಮೆಯಿಲ್ಲದೆ ತಮ್ಮ ಶಕ್ತಿ, ಸಾಮರ್ಥ್ಯಗಳಲ್ಲಿ ನಂಬಿಕೆಯಿಟ್ಟು ಮಹತ್ವದ್ದನ್ನು ಸಾಧಿಸ ಹೊರಡುವ ಮತ್ತು ಅದರಲ್ಲಿ ವಿಜಯಿಗಳಾದ ಮಹಿಳೆಯರನ್ನು ಗುರುತಿಸಿ ಗೌರವಿಸುವ ದಿನ ಅದೆಲ್ಲಕ್ಕಿಂತ ಮುಖ್ಯವಾಗಿ ಇಂದಿನ ಮಹಿಳೆಯರು ಅನುಭವಿಸುತ್ತಿರುವ ಎಲ್ಲಾ ಸೌಕರ್ಯ ಸೌಲಭ್ಯಗಳಿಗೆ ಕಾರಣರಾದ ನಮ್ಮ ಆರಂಭದ ಹೋರಾಟಗಾರ್ತಿಯರ ಶ್ರಮ, ಸಾರ್ಥಕತೆಯನ್ನು ನೆನಪಿಸಿಕೊಂಡು ಕೃತಜ್ಞತೆ ಸಲ್ಲಿಸಬೇಕಾದ ದಿನ ಮಹಿಳಾ ದಿನವಾಗಬೇಕಾಗಿದೆ. ಆದರೆ ಮಹಿಳಾ ದಿನಾಚರಣೆಯ ಎಲ್ಲಾ ಕಾರ್ಯಕ್ರಮಗಳೂ ಹಾಗೆ ನಡೆಯುತ್ತಿಲ್ಲ. ಶತಮಾನಗಳ ಮಾನಸಿಕ ದಾಸ್ಯದಿಂದ ಹೊರಬರಲಾಗದ ಹೆಣ್ಣು ತನ್ನನ್ನು ಸುತ್ತುವರಿದಿರುವ ಹಲವಾರು ಭ್ರಮೆಗಳನ್ನು ವಾಸ್ತವವೆಂದು ಪರಿಗ್ರಹಿಸಿ ಸಾಂಪ್ರದಾಯಿಕ, ಸಂಕುಚಿತ ಮೌಲ್ಯಗಳನ್ನೇ ಪೋಷಿಸಿ, ಅಂತರ್ಗತಗೊಳಿಸಿಕೊಂಡಿದ್ದಾಳೆ. 'ಮಹಿಳಾ ದಿನ'ವೆನ್ನುವುದು ಈ ಮೌಲ್ಯಗಳ ವಿಜೃಂಭಣೆಯಾಗುತ್ತಿದೆಯಷ್ಟೇ.

ದಿನನಿತ್ಯ ಮಹಿಳೆಯರ ಮೇಲಿನ ದೌರ್ಜನ್ಯ, ಅತ್ಯಾಚಾರ, ಹಿಂಸೆಯ ಪ್ರಕರಣಗಳು ಹೆಚ್ಚುತ್ತಲೇ ಇವೆ. ಬದಲಾದ ಸಾಮಾಜಿಕ, ಆರ್ಥಿಕ ಪರಿಸ್ಥಿತಿಯಲ್ಲಿ ಹೆಣ್ಣನ್ನು ನೋಡುವ ದೃಷ್ಟಿ ವಾಣಿಜ್ಯಮಯವಾಗಿದೆ. ಸರಕು ಸಂಸ್ಕೃತಿಯು ಹೆಣ್ಣನ್ನು ಎಲ್ಲ ಮಾನವೀಯ ಮೌಲ್ಯಗಳಿಂದ ದೂರವಿಟ್ಟಿದೆ. ಆದ್ದರಿಂದಲೇ ಹೆಣ್ತನದ ಘನತೆ ಮತ್ತು ವ್ಯಕ್ತಿತ್ವವನ್ನು ಕಾಯ್ದುಕೊಳ್ಳುವಂತಹ, ಗೌರವಿಸುವಂತಹ ಮತ್ತು ಅರ್ಥಪೂರ್ಣ ಬದುಕಿನ ರೂವಾರಿಗಳಾಗುವಂತಹ ಸುಭದ್ರ ಸ್ಥಿತಿಯ ಹೋರಾಟದ ಆಶಯ ಇಂದಿನ ಮಹಿಳಾ ದಿನದ ಆಶಯವಾಗಬೇಕಿದೆ.

– ಎನ್. ಗಾಯತ್ರಿ

ದಾಳ

– ಗೀತಾನಾಗಭೂಷಣ

ಅಕ್ಕನ ಬಳಗದ ಟೋಳಿಯೊಂದಿಗೆ ತಸೀಲ್ದಾರ ಕಚೇರಿಗೆ ಹೋಗಿ ಚುನಾವಣೆಗಾಗಿ ತನ್ನ ನಾಮಿನೇಶನ್ ಫಾರಮ್ ಸಲ್ಲಿಸಿ ಬಂದಾಗಿನಿಂದ ಕಾಶಿಗೆ ತಲೆಯೆಂಬೋ ತಲೆಯೆಲ್ಲಾ ಹುಳುಗಳ ಹಿಂಡೇ ಹರಿದಾಡಿದಂತಾಗಿ ಕುಂತಲ್ಲಿ ಕೂಡಲಾರದೆ, ನಿಂತಲ್ಲಿ ನಿಲ್ಲಲಾರದ ಕುಂಡಿ ಸುಟ್ಟುಕೊಂಡ ಬೆಕ್ಕಿನಂತೆ ಆ ಕಡೆಯಿಂದ ಈ ಕಡೆಗೆ ಈ ಕಡೆಯಿಂದ ಆ ಕಡೆಗೆ ಬೇಚೈನಾಗಿ ತಿರುಗಾಡುತ್ತಿದ್ದಳು. ಹಾಂಗ ನೋಡಿದರೆ ಈ ಪಂಚಾಯತ ಇಲೆಕ್ಷನ್ನಿಗೆ ನಿಂದ್ರೋದು ಕಾಶಿಗೆ ಸೊಲುಪವೂ ಮನಸ್ಸಿರಲಿಲ್ಲ. ಹಳ್ಳಿಯ ಅನಪಢ ಹೆಂಗಸು ಅವಳು, ಅನಪಢ ಅಂದರೆ ಪೂರಾ ಅನಕ್ಷರಸ್ತಳೇನೂ ಆಗಿರಲಿಲ್ಲ ಕಾಶಿ, ಒಂದು ವರ್ಷದ ಕೆಳಗೆ ರಾತ್ರಿ ಸಾಲಿಯಲ್ಲಿ ಒಂದಿಷ್ಟು ಓದು ಬರಹ ಕಲಿತಿದ್ದಳು. ಕನ್ನಡವನ್ನು ಸರಾಗವಾಗಿ ಓದಲು ಮತ್ತು ಸರಳವಾಗಿ ನಾಲ್ಕೈದು ವಾಕ್ಯಗಳನ್ನು ಬರೆಯಲು ಕಲಿತಿದ್ದಳು. ಆ ಹಳ್ಳಿಯ ಕೆಳಗೇರಿಯ ಹೆಂಗಸರಲ್ಲೆಲ್ಲ ಕಾಶಿಯೊಬ್ಬಳೇ ಇಷ್ಟು ಕಲಿತಿದ್ದು.

ಕಾಶಿ ಹುಲ್ಲಿನ ಹೊರೆಯನ್ನು ಹೊತ್ತು ತಂದು ಗೋಡನ ಅಂಗಳದಲ್ಲಿ ಒಗೆದು, ಸೀರೆಯ ಕಚ್ಚೆ ಬಿಚ್ಚಿ ಸೆರಗಿನಿಂದ ಹಣೆ, ಕುತ್ತಿಗೆ, ಮಾರಿ ಒರೆಸಿಕೊಂಡು ಉದ್ದನೆಯ ಉಸಿರು ಬಿಡುವಾಗ ಸೂರ್ಯ ತಾಯಿಯ ಹೊಟ್ಟೆ ಸೇರುತ್ತಿದ್ದ. ಆಕಾಶದಲ್ಲಿ ಕೆಂಪು ಬಣ್ಣ ಅಡ್ಡಾದಿಡ್ಡಿಯಾಗಿ ಕಾಲಾಡಿಸುತ್ತಾ ಕರ ಕರನೆ ತಲೆ ತುರಿಸಿಕೊಳ್ಳುತ್ತಿತ್ತು.

"ಯವ್ವಾ ಗೋಡ್ತಿ ..... ನಾ ಮನೀಗಿ ಹೋಗ್ತೀನ್ರೀ ...." ಎಂದು ಹೇಳಿ, ಗೋಡ್ತಿ ಕೊಟ್ಟ ರೊಟ್ಟಿ ಪುಂಡಿಪಲ್ಲೆಯನ್ನು ಸೆರಗಿನಲ್ಲಿ ಸುತ್ತಿಕೊಂಡು ಅವಳು ಗಸಗಸನೆ ಮನೆಯ ದಾರಿ ತುಳಿದಳು.

ಸಂಜೆ ಅಡಿಗೆಯ ಗೋಜಿರಲಿಲ್ಲ. ಗೊಡ್ತಿ ಕೊಟ್ಟ ರೊಟ್ಟಿ ಸಾಕಾಗಿತ್ತು. ಕೈಕಾಲು ಮಾರಿ ತೊಳೆದುಕೊಂಡು ಬಂದು ಅಂಗಳದಲ್ಲಿ ಕುಂತಳು. ಅವಳ ತಲೆಯಲ್ಲಿ ಅಂದು ಬೆಳಗಿನಲ್ಲಿ ನಾಮಪತ್ರ ಸಲ್ಲಿಸಲು ಹೋಗಿ ಬಂದಾಗಿನ ಎಲ್ಲ ದೃಶ್ಯಗಳು, ಹಚಾ ಎಂದು ದಬ್ಬಿದಷ್ಟು ಮತ್ತೆ ಬಂದು ಜೊಲ್ಲು ಸೋರಿಸುತ್ತ ನಿಲ್ಲುವ ನಾಚಿಕೆಗೇಡಿ ನಾಯಿಯಂತೆ ಮತ್ತೆ ಮತ್ತೆ ಕಣ್ಣ ಮುಂದೆ ಬಂದು ನಿಲ್ಲುತ್ತಿದ್ದವು.

ಗೆಳತಿಯರ ಮತ್ತು ಊರ ಗೋಡನ ಬಲವಂತದಿಂದಾಗಿ ಕಾಶಿ ಈ ಪಂಚಾಯತ ಚುನಾವಣೆಗೆ ನಿಂತಿದ್ದಳು. ಅವರೆಲ್ಲರೊಂದಿಗೆ ನಾಮಪತ್ರ ಸಲ್ಲಿಸಿ ವಾಪಸ ಹೊರಟಿದ್ದಳು. ಎದುರಿನಿಂದ ಹಲಗೆ, ಬಾಜಿಗಳ ಮಿಲಾವಟ ಆವಾಜುಗಳೊಂದಿಗೆ ಮೆರವಣಿಗೆಯಲ್ಲಿ ಗಂಡೆಪ್ಪ ತಾನೂ ಎಲೆಕ್ಷನ್ನಿಗೆ ನಾಮಪತ್ರ ಸಲ್ಲಿಸಲು ಹೊರಟಿದ್ದ. ಅವನ ಕೊರಳಲ್ಲೊಂದು ಸೇವಂತಿಗೆ ಹುವ್ವಿನ ಹಾರವಿತ್ತು. ಬಿಳಿ ಧೋತರ, ತುಂಬು ತೋಳಿನ ನೀಲಿ ಬಣ್ಣದ ಅಂಗಿ ತೊಟ್ಟು ಇಪ್ಪತ್ತು ಮಂದಿ ಗೆಳೆಯರ ನಡುವೆ ಗೆಂಡಪ್ಪ ಠೀವಿಯಿಂದ ನಡೆದು ಬರುತ್ತಿದ್ದ. ಕಾಶಿ ಮತ್ತು ಗೆಳತಿಯರು ಎದುರು ಬಂದಾಗ ಸಹಜವಾಗಿಯೆ ಗೆಂಡೆಪ್ಪನ ಕೆಂಡದುಂಡೆಯಂಥ ಕಣ್ಣುಗಳು ಕಾಶಿಯ ಕಣ್ಣುಗಳಿಗೆ ತೆಕ್ಕೆಬಿದ್ದುವು.

ಎಣ್ಣೆ ಕುಡಿದು ಮಿರಿ ಮಿರಿ ಮಿಂಚುವ ಕರ್‍ರಗಿನ ತಲೆಗೂದಲು, ನೆಟ್ಟನೆಯ ಮೂಗಿನ ಕೆಳಗಿನ ಕಸಭಾರಿಗೆಯಂಥ ಮೀಸೆ, ಉಬ್ಬಿದ ಗಲ್ಲಗಳ ಗೆಂಡೆಪ್ಪನನ್ನು ತುಸು ದಿಟ್ಟಿಸಿದವಳೇ ಕಾಶಿ ತಟ್ಟನೆ ನೋಟ ತಪ್ಪಿಸಿದಳು. ಅವನು ಗತ್ತಿನಿಂದ ನಕ್ಕು ಮೀಸೆ ಸವರಿಕೊಂಡ, ಇರುಕ ಎತ್ತಿನಂತೆ ಮತ್ತೊಮ್ಮೆ ಕಾಶಿಯ ಮಾರಿ ನೋಡಿ ಘುರುಕಿ ಹೊಡೆಯುವಂತೆ ಕೆಮ್ಮಿ ಮುಂದೆ ನಡೆದ.

"ಆ ನನ್ ಹಾಟಗಳ್ಳನ ಸೊಕ್ಕ ಏಟದಾ ನೋಡ್ರೇ ಪೋರೀ.... ಮೆರಗವ್ವನ ಕಾರ್‍ಯಾಕ ಬಿಟ್ಟ ಕ್ವಾಣಾ ಆಗ್ಯಾನ. ನೀ ಒಂದೀಟು ಹುಷಾರಿಲಿಂದ ಇರ್ಬೇಕು ನೋಡು ಮಗಾ ಕಾಶೀ....ಈ ಬದಮಾಸ ಹಿಂಗೇ ಅಂತ ಭರೋಸಾ ಇಲ್ಲವ್ವಾ.. "ಕಾಶಿಯ ಟೋಳಿಯಲ್ಲಿಯ ಮುದುಕಿ ಕುಂಟೆವ್ವ ಮಣ ಮಣ ಮಾಡಿತು. ಕಾಶಿಯ ವಾರಿಗೆಯ ಹೆಂಗಸರು ಕಿಸಕ್ಕನೆ ನಕ್ಕರು. ಕಾಶಿ ಮೂಕಳಾಗಿ ಮುಂದೆ ನಡೆದಳು.

ಗೆಂಡೆಪ್ಪನ ಕಡೆಯ ಹಿಂಡು ಗಂಡುಗಳು ನಗುತ್ತ, ಘೋಷಣೆ ಕೂಗುತ್ತ ಕಾಶಿಯ ಮಾರಿ ನೋಡಿ ಮತ್ತಷ್ಟು ಜೋರಾಗಿ "ಗೆಂಡೆಪ್ಪ ... ಜಿಂದಾಬಾದ್ ..... " ಎಂದು ಒದರುತ್ತ ಮುಂದೆ ನಡೆದರು.

ಇದೇ ದೃಶ್ಯ ಕಾಶಿಯ ಕಣ್ಣುಗಳ ಮುಂದೆ ಮತ್ತೆ ಮತ್ತೆ ಬಂದು ನಿಲ್ಲುತ್ತಿತ್ತು. ಹತ್ತು ವರ್ಷಗಳ ಹಿಂದಿನ ತನ್ನ ಬದುಕಿನ ನೆನಪಿನ ಮಡುವಿಗೆ ಕಾಶಿ ಸದ್ದಿಲ್ಲದೆ ಜಾರಿದಳು....

ಹತ್ತು ಹನ್ನೆರಡು ವರ್ಷಗಳ ಹಿಂದಿನ ಮಾತು. ಅದೇ ಆಗ ಗೆಂಡೆಪ್ಪ ಕಾಶಿಯನ್ನು ಮದುವೆಯಾಗಿ ಈ ಹಳ್ಳಿಗೆ ಕರೆದುಕೊಂಡು ಬಂದಿದ್ದ. ಕಸುವು ತುಂಬಿದ್ದ ಕಾಶಿಯ ಮೈಯಲ್ಲಿ ಹುಮ್ಮಸ್ಸಿನಿಂದ ಹರಿದಾಡುವ ಹಸಿ ಹಸಿ ಹರೆಯಕ್ಕೆ ತಳಕು ಹಾಕಿಕೊಂಡಿದ್ದ, ಕಣ್ಣು ಕುಕ್ಕುವ ಅವಳ ಚೆಲುವಿಕೆಯನ್ನು ಕಂಡು ಕೇರಿಯ ಮಂದಿ ದಂಗಾಗಿದ್ದರು. ಕೆಲವರು ಹೊಟ್ಟೆ ಕಿಚ್ಚನ್ನು ಮಾತಿನ ಮೂಲಕ ಕಾರಿಕೊಂಡಿದ್ದರು ಕೂಡ.

"ಅಯ್ಯ... ಇಕಿಯೇನ ಯವ್ವಾ..... ಹಾರ್‍ರ ಹೆಂಗಸಾಗ್ಯಾಳ, ಈಟು ಬೆಳ್ಳಗ, ಈಟು ಚೆಲುವಿಕಿ ನಮ್ಮ ಕಪ್ಪ ಮಂದ್ಯಾಗ ಎಲ್ಲಿರ್‍ತಾರ? ಇಕಿ ಹಾರ್‍ರ ಬೀಜಕ್ಕೇ ಹುಟ್ಟಿರ್ಬೇಕು ಬಿಡು...."

"ಈಟು ಸೂರತ್ ಇರೋ ಹೆಣ್ಣದು. ಚೆಲು ಚೆಲು ಚಂದ್ರಾಮ ಚೀಟಾಗ್ಯಾಳಲ್ಲ..... ಈ ಕರಿಮಾರಿ ಗೆಂಡ್ಯಾಗ ಹ್ಯಾಂಗ ಮಾಡ್ಕೊಂಡ್ಳು ಅಂತೀನಿ... ಇಕಯೇನು ಇವನ ಜೋಡಿ ಜಿನಗನಿ (ಸಂಸಾರ)ಮಾಡಂಗಿಲ್ಲ ಬಿಡು. ವರ್ಸಯಿರದಾಗೇ 'ಈಗ ಬರ್‍ತೀನಿ ಎಲ್ಲೇ ಕೂಡು ಅಂತ ಹೇಳಿ ಇಂವನ ತೆಲಿ ಬಡ್ದು ಯಾಂವನ ಜೋಡಿಯರೆ ಹಾರಿ ಹೋಗ್ತಾಳ........"

ಕೆಳಗೇರಿಯ ಮಂದಿ ಹಿಂಗ್ ಮಾತಾಡಿದರೆ ಮ್ಯಾಗೇರಿಯ ದೊಡ್ಡ ಜಾತಿ ಮಂದಿ ಆಡಿದ್ದ ಮಾತುಗಳು ಬೇರೆಯವೇ ಆಗಿದ್ದುವು.

"ಕರಡಿ ಕೈಯಾಗ ಕಪ್ಪುರದ ಗೊಂಬಿ ಕೊಟ್ಟ್ಹಾಂಗ ಆಗ್ಯಾದಲ್ಲೋ ಸಾವ್ಕಾರಾ... ದನಾ ತಿನ್ನಾ ಕರಿಕುಂಡಿ ಗೆಂಡ್ಯಾಗ ಹಿಂತಾ ಬೆಳದಿಂಗಳ್ಹಂತಾ ಪೋರಿ ಸಿಕ್ಕಾಳಲ್ಲಪ್ಪಾ..."

ಹಣಮಂದೇವರ ಗುಡಿಕಟ್ಟೆ ಮೇಲೆ ಕುಂತು ತಂಬಾಕು ತಿನ್ನುತ್ತಿದ್ದ ರಂಗಪ್ಪಾಚಾರಿ ಪಕ್ಕದಲ್ಲಿ ಕುಂತಿದ್ದ ಹಳ್ಳಿ ಸಾವ್ಕಾರನಿಗೆ ಹೇಳಿ ಪಿಸಿಪಿಸಿ ನಕ್ಕು ಕಣ್ಣು ಹೊಡೆದಿದ್ದ.

"ಮಂಗ್ಯಾನ ಕೈಯಾಗ ಮಾಣಿಕ ಕೊಟ್ಟಾಂಗ ಆಗ್ಯದಲ್ಲೋ ಇವನವ್ವನ ಹಡಾ... ಈ ಕಾಶಿಗಿ ನೋಡ್ದರ ಸಾಕು ನಮ್ಮಾಂತಾ ಗಂಡಗೋಳ ತೋಡಿಸಂದ್ಯಾಗೆಲ್ಲಾ ಕೆಂಜಗ ಹರದಾಡ್ತಾವಲ್ಲೋ... ಹ್ಯಾಂಗರೆ ಮಾಡಿ ಒಂದ್ ರಾತ್ರಿಯಾರೆ ಇಕಿನ ಮಗ್ಗಲಾಗ ಮಲ್ಕೋಬೇಕು ನೋಡೂ ...." ಸಾವ್ಕಾರ ಗುಲ್ಲಿಂಗಪ್ಪ ತನ್ನ ದೋಸ್ತನ ಮುಂದೆ ಹೇಳಿ ಚಡಪಡಿಸುತ್ತ ಕರಕರನೆ ತೊಡೆ ತುರಿಸಿಕೊಂಡಿದ್ದ.

ಕಾಶಿಯ ಹರೆಯ, ಹರೆಯಲ್ಲಿಯ ಸೊಕ್ಕು, ಸೊಕ್ಕಿನಲ್ಲಿಯ ಚೆಲವುಗಳೆಲ್ಲ ಹಳ್ಳಿಯ ಗಂಡುಗಳ ಬೆನ್ನ ಹುರಿಗೆ ಬೆಂಕಿ ಹೊತ್ತಿಸಿದ್ದರೂ ಅವಳಿಗೆ ಮಾತ್ರ ಇದಾವುದರ ಅರಿವೇ ಇಲ್ಲದೆ ಹಾಯಾಗಿದ್ದಳು. ಗೆಂಡೆಪ್ಪನ ಬಣ್ಣ ಕಪ್ಪಗಿದ್ದರೂ, ಕಣ್ಣು ಕೆಂಪಗಿದ್ದರೂ ಅವನ ಮೈಮಾತ್ರ ಉಕ್ಕಿನದಾಗಿತ್ತು. ಕರಕಲ್ಲಿನಲ್ಲಿ ಕಟೆದಂತಿದ್ದ ಅವನು ರಸಿಕನಾಗಿದ್ದು ಕಾಶಿಯ ಹಾಸಿಗೆಯಲ್ಲಿ ಕೈಲಾಸ ಕಡಿದು ಬೀಳಿಸುತ್ತಿದ್ದ. ಹರೆಯದ ಮೈಗಳು ತಳಕು ಹಾಕಿಕೊಂಡು ಸುಖದ ಸರಾಯಿಯನ್ನು ಬೊಗಸೆಯೊಡ್ಡಿ ಕುಡಿಯುವಾಗ ಗೆಂಡೆಪ್ಪನ ಕರಿ ಬಣ್ಣ ಬರಲಿಲ್ಲ. ಕಾಶಿಗೆ ಅವನ ಬಗ್ಗೆ ಯಾವ ತಕರಾರೂ ಬರಲಿಲ್ಲ.

ದಿನಗಳು ಹುಟ್ಟಿ ಹುಟ್ಟಿ ಸಾಯುತ್ತಿದ್ದುವು. ಸಮಯ ಸರಿಯುತ್ತಿತ್ತು. ಹಸಿರುಟ್ಟು, ಹಳದಿ ತೊಟ್ಟ ಅಡವಿಯೊಳಗಿನ ಗಿಡಮರಗಳೆಲ್ಲ ಸಿಂಗಾರವಾಗಿ ನಿಂತವು. ನೆಲ ಬಣ್ಣದ ಹುಟ್ಟಿಗೆ ತೊಟ್ಟಿತು. ಹಳ್ಳ ಕೊಳ್ಳಗಳೆಲ್ಲ ನೀಲಿ ಉಡುಗೆ ತೊಟ್ಟು ಸೊಕ್ಕಿನಿಂದ ವೈಯಾರ ಬೀರಿದವು.

ಗೆಂಡೆಪ್ಪ ಅಂದು ಮನೆಗೆ ಬಂದಾಗ ರಾತ್ರಿಯಾಗಿತ್ತು. ಈಗೀಗ ಅವನು ಬರುವುದು ರಾತ್ರಿ ಬಹಳ ಏರಿದ ಮೇಲೆಯೇ. ಹತ್ತಿರ ಸರಿದವಳನ್ನು ದೂರ ತಳ್ಳಿ ಬಿದ್ದು ಗೊರಕೆ ಹೊಡೆಯತೊಡಗಿದನು. ತನ್ನ ಗಂಡ ತನ್ನಿಂದ ದೂರ ಸರಿದಿದ್ದಾನೆ ಅನ್ನೋ ಸತ್ಯ ಕಾಶಿಗೆ ಥಟ್ಟನೆ ಹೊಳೆದು ಎದೆಯಲ್ಲಿ ನೆಗ್ಗಿನ ಮುಳ್ಳು ಮುರಿದಂತಾಗಿ ಕಣ್ಣಂಚು ನೆನೆದವು.

ಕಚ್ಚೆ ಹರುಕ ಗೆಂಡೆಪ್ಪನಿಗೆ ಬಹಳ ಕಾಲ ಹೆಂಡತಿಯೊಬ್ಬಳನ್ನೆ ಬಳಸಿಕೊಂಡು ಇರಲು ಆಗಲಿಲ್ಲ. ತನ್ನ ನಾಯಿಬುದ್ಧಿ ತೋರಿಸ ತೊಡಗಿದ. ಸೈರ್ಯಾ ಬಿಟ್ಟ ದನದಂತೆ ಅಲ್ಲಿ ಇಲ್ಲಿ ಸಂದಿಗೊಂದಿಗಳಲ್ಲಿ ಸರಗ್ಯಾಡತೊಡಗಿದ ಮತ್ತೆ ಅವನ ಹಲ್ಕಟ್‌ಗಿರಿ ಸೂಳೆಗೇರಿಯ ಹೆಣ್ಣುಗಳ ತೊಡೆಗಳನ್ನು ಅರಸುತ್ತ ಓಡಾಡಿತು.

ತಾಯಿ ತಂದೆಯನ್ನು ಕಳೆದುಕೊಂಡಿದ್ದ ಕಾಶಿಗೆ ತವರೂರು ಎರವಾಗಿತ್ತು. ಮದುವೆಯಾಗಿ ಆರು ವರ್ಷಗಳಾದರೂ ಅವಳ ಚಂದದ ಮೈ ಹೂವರಳಿಸಿರಲಿಲ್ಲ. ಬಾಳೆಯ ಸುಳಿಯಂಥ ಹೊಟ್ಟೆಯೊಳಗಿನ ಮಕ್ಕಳ ಮನೆಯಲ್ಲಿ ಗೆಂಡೆಪ್ಪನ ಬೀಜ ಪಿಂಡಗಟ್ಟಿರಲಿಲ್ಲ. ಈಗ ಗಂಡನೂ ಮೈಮನಸ್ಸುಗಳಿಂದ ದೂರ ಸರಿಯ ತೊಡಗಿದಾಗ ಕಾಶಿ ಕಂಗಾಲಾದಳು. ಹಗಲೆಲ್ಲಾ ಕೂಲಿನಾಲಿಯೆಂದು ಉಳ್ಳವರ ಹೊಲಗಳಲ್ಲಿ ದುಡಿದು ಬಂದವಳು ರಾತ್ರಿಯೆಲ್ಲ ಪಗಡಿ ಬಾಜಾರಿನ ಚಿತ್ತಾರದರ ಕೌದಿಯಲ್ಲಿ ಒಬ್ಬಳೇ ಒದ್ದಾಡುತ್ತಾ ನಿದ್ದೆಯ ಕುತ್ತಿಗೆ ಒತ್ತುತ್ತಿದ್ದಳು.

ಆಗಾಗ ಅವಳ ಮನಸ್ಸು ಚಾನಿಸುತ್ತಿತ್ತು, ಯಾಕ್ ತನ್ ಬಾಲ್ಯಾ ಹಿಂಗಾಯ್ತು ? ತನ್ನ ರೂಪಾ, ಬಣ್ಣಾ, ಚೆಲುವಿಕಿಗಿ ಹಳ್ಳಿಯ್ಹಂಥಾ ಹಳ್ಳ್ಯಾಗಿನ ಗಂಡಸರೆಲ್ಲಾ ಜೊಲ್ಲ ಸುರಸತಾರ ಖರೇ. ಅದರ ತನ್ ಗಂಡ ಯಾಕ ತನಲಿಂದ ಏಕದಂ ದೂರ ಆಗಿ ಧಂಧಾ ಮಾಡಾ ಸೂಳೇರ ಎಂಜಲ ಮೈ ನೆಕ್ಕತಾನ? ತಾನು ಅಂವಗೇನು ಕಮ್ಮಿ ಮಾಡಿದ್ದ ಅಂತೀನಿ? ತನ್ ಮೈಯಾಗಿನ ಹರ್ರ್ಯಾ ಇನ್ನಾ ಮೆತ್ತಗಾಗಿಲ್ಲ, ತನ್ನ ಮಾರ್ಯಾಗಿನ ಚೆಲುವಿಕಿ ಇನ್ನಾ ಬತ್ತಿ ಹೋಗಿಲ್ಲ. ತನ್ ಮೈಮ್ಯಾಲಿನ ಬಿಳಿ ತೊಗಲು ಹಿನಾ ಮಾಸಿ ಕರ್ರಗಾಗಿಲ್ಲ. ಆದರನೂ ಈ ಗಂಡ ಯಾಕ್ ತನ್ ಹಾಸಗಿಲಿಂದ ಹಿಂಗ್ ದೂರಾದ ಅಂಬೋ ಯೋಚನಿ ಆಗಾಗ ಓಡೋಡಿ ಬಂದು ಇರಕ್ ಗೂಳಿಹಂಗ ಆಕಿನ ಎದಿಗಿ ಇರೀತಿತ್ತು. ಇಂವಗ ತಾನೊಬ್ಬಕ್ಕಿದೇ ಸಾಕಾಗಂಗಿಲ್ಲಂತ ಕಾಣಸ್ತದ. ಎಲ್ಲೋ ಜೋಕ್ಕಯಾನ ಚಿದ್ಯಾಗ ಹುಟ್ಟಿರ್ಬೇಕು ಈ ಖಬರಗೇಡಿ ಭ್ಯಾಡ್ಯಾ ಅಂತ ಒಳಗೊಳಗೇ ಬೈಯುತ್ತಿದ್ದಳು. ಇದೇ ಕಾರಣಕ್ಕಾಗಿ ಮನೆಯಲ್ಲಿ ಜಗಳ, ಕಿರಿಕಿರಿ ನಡೆಯುತ್ತಿದ್ದುವು. ಒಮ್ಮೆ ಗೆಂಡಪ್ಪ ಅವಳನ್ನು ಹಿಯಾಳಿಸಿ ಬೈಯ್ದಿದ್ದ. "ಮದಿ ಆಗಿ ಹತ್ತೋರ್ಸಾದರನೂ ನಿನಗ ಒಂದು ಕೂಸಿಗಿ ಹಡ್ಯಾ ತಾಕತಿಲ್ಲ. ನಿನ್ ಬಲ್ಲಿ ಹೆಣ್ಣತನಾನೇ ಇಲ್ಲ. ನಾ ಬಿತ್ತಿದ ಬೀಜಕ್ಕ ನಾಟಸಲಾರ್ದ ನಿನ್ ಮೈ ಹೆಣ್ಣಿನ ಮೈ ಅಲ್ಲ. ನನ್ ಪಿಂಡಾ ಬೆಳೆಸಲಾರ್ದ ನಿನ್ ಹೊಟ್ಟಿ ಹೆಣ್ಣಿನ ಹೊಟ್ಟಿ ಅಲ್ಲೆಲೇ ರಂಡೀ, ಹಾಂಗ ನೋಡ್ದರ ನೀ ಒಂದು ಹೆಣ್ಣೇ ಅಲ್ಲ. ಹೆಣ್ಣಿನ ಮೈ ಹೊತ್ತ ಗಂಡ ಜೋಗಣಿ ನೀ.......ಖೊಜ್ಜಾಯಿದ್ದಿ ನೀ............ಹೈದರಬಾದ ಖೊಜ್ಜಾ........"

ಕಾಶಿ ಅಪಮಾನದಿಂದ ಥರಥರನೆ ನಡುಗಿದ್ದಳು. ನಿಂತಲ್ಲೇ ನೆಲಕ್ಕೆ ಕುಸಿದಿದ್ದಳು. ನೆಲ ಸೀಳಿ ತನ್ನನ್ನು ನುಂಗಿ ಬಿಡಬಾರದೇ ಅಂತ ನಾಚಿಕೆಯಿಂದ ಲಜ್ಜೆಯಿಂದ ಹಿಡಿಯಾಗಿ ನೆಲಕ್ಕೊತ್ತಿ ಕೊಂಡಳು. ಭೂಮಿ ಸವರ್ಯಾಡಿ ಗೋಳೋ ಎಂದು ಅಳುತ್ತ ಎರಡೂ ಕೈಗಳಿಂದ ಹೊಟ್ಟೆ, ಕಿವುಚಿಕೊಳ್ಳುತ್ತ ನೀರು ಬಿಟ್ಟ ಮೀನಿನಂತೆ ವಿಲವಿಲನೆ ಒದ್ದಾಡಿದ್ದಳು. ಗೆಂಡಪ್ಪ ಥೂ ಎಂದುಗುಳಿ ಹೊರಟ ಹೋಗಿದ್ದ.

ಹಾಗೆ ಹೋಗಿದ್ದ ಗೆಂಡೆಪ್ಪ ತಿಂಗಳ ನಂತರವೇ ಹಳ್ಳಿಗೆ ವಾಪಸ ಬಂದದ್ದು. ಬಂದಾಗ ಒಬ್ಬನೇ ಬರಲಿಲ್ಲ. ಮತ್ತೊಂದು ಹೆಣ್ಣನ್ನು ಮದುವೆ ಮಾಡಿಕೊಂಡು ಜೊತೆಗೆ ಕರೆದುಕೊಂಡು ಬಂದನು.

ಕಾಶಿ ಸುಮ್ಮನಿರಲಿಲ್ಲ. ಹಳ್ಳಿಯ ಪಂಚಾಯ್ತಿ ಕಟ್ಟೆಗೆ ಫಿರ್ಯಾದೆ ಸಲ್ಲಿಸಿ ನ್ಯಾಯ ಕೇಳಿದಳು. ಪಂಚಾಯ್ತಿ ನೆರೆಯಿತು. ಪಂಚರು ಕಾಶಿಯ ಕೋರಿಕೆಯಂತೆ ಅವಳಿಗೆ ಗೆಂಡೆಪ್ಪನಿಂದ ಫಾರಿಕತಿಯನು ಕೊಡೆಸಿದರು. ಮುಗಿಯಿತು. ಅಂದಿನಿಂದ ಕಾಶಿಗೂ ಗೆಂಡೆಪ್ಪನಿಗೂ ಇದ್ದ ಸಂಬಂಧ ಕಡಿದು ಹೋಯಿತು. ಹತ್ತು ವರ್ಷಗಳವರೆಗೆ ಮದುವೆಯ ಹಣೆಪಟ್ಟಿಯಡಿಯಲ್ಲಿ ಬೆಸೆದುಕೊಂಡಿದ್ದ ಅವರಿಬ್ಬರ ಮೈ ಮನಗಳು ಬೇರ್ಪಟ್ಟು ಆ ಭ್ರಮೆಯಿಂದ ದೂರ ಸಿಡಿದುವು. ಗಂಡ ಹೆಂಡತಿ, ಪ್ರೀತಿ ಪ್ರೇಮ, ನಂಬಿಕೆ ಭರವಸೆ ಮೊದಲಾದವುಗಳೆಲ್ಲ ತಮ್ಮ ಅಸಲಿತನಕ್ಕೆ ಬೆಂಕಿ ಹತ್ತಿಸಿಕೊಂಡು ಸುಟ್ಟು ಕರಕಲಾದುವು. ಮದುವೆ–ಅದು ಗಂಡು ಹೆಣ್ಣುಗಳ ಕಾಮ ತಣಿಸುವ ಹುನ್ನಾರು ಆಗಿತ್ತು ಎನ್ನಿಸಿತು ಕಾಶಿಗೆ. ಎಲ್ಲ ಮದುವೆಗಳ ಹಣೆ ಬರಹವೂ ಇಷ್ಟೆ ಏನೋ.... ಮೊದ ಮೊದಲು ಪ್ರೀತಿ

ಪ್ರೇಮವೆಂಬ ಭ್ರಮೆ. ಕಾಮ ತಣಿದ ಮೇಲೆ ಅನಾಸಕ್ತಿ. ಮುಂದಿನದು ಮನಸ್ಸಿಲ್ಲದ ಹೊಂದಾಣಿಕೆ ಅಷ್ಟೆ. ಗಂಡ, ಹೆಂಡ್ತಿ, ಮಕ್ಕಳು, ಸಂಸಾರ ಅಂಬೋದೆಲ್ಲ ಬರೀ ಖೊಟ್ಟಿತನದ, ಸೋಗಿನ ಸಂಬಂಧಗಳು ಅನ್ನಿಸಿದುವು ಕಾಶಿಗೆ,

ಕಾಶಿ ತನ್ನ ಕರಿಮಣಿಯ ತಾಳಿ ಕಡಿದುಕೊಟ್ಟು ಗೆಂಟೆಪ್ಪನ ಮನೆಯಿಂದೇನೊ ಹೊರಗೆ ಬಂದಳು ಖರೇ. ಆದರೆ ಆ ಹಳ್ಳಿಯಿಂದ ಹೊರಗೆ ಹೋಗಲಿಲ್ಲ, ಅಲ್ಲಿಯೇ ಇದ್ದು ಅವನ ಮಾರಿಯ ಮೇಲೆ ಒದ್ದಂತೆ ಗರತಿಯಾಗಿ ಬದುಕಿ ತೋರಿಸ ಬೇಕನ್ನುವ ಛಲ ತೊಟ್ಟು ಹೊಸ ಬಾಳುವೆಯನ್ನು ಶುರು ಮಾಡಿದಳು.

ದಿನಗಳು ಹುಟ್ಟುತ್ತಿದ್ದುವು ಸಾಯುತ್ತಿದ್ದವು, ಆಕಾಶದಲ್ಲಿ ಸೂರ್ಯ ಚಂದ್ರಾಮರು ಪಾಳಿಯ ಪ್ರಕಾರ ಪಹರೆ ಕಾಯುತ್ತಿದ್ದರು, ಹುಣ್ಣಿಮೆ ಅಮಾವಾಸ್ಯಗಳು ಕೈ ಕೈ ಹಿಡಿದುಕೊಂಡು ಕಳ್ಳ್ಯಾ ಮುಳ್ಳ್ಯಾ ಆಡುತ್ತಿದ್ದುವು. ಆಗಸದ ಕತ್ತಲೆಯ ಕೌದಿಗೆ ಬಾಯಿ ಹಾಕಿ ತೂತು ಕೊರೆಯುವ ತಮ್ಮ ಹುನ್ನಾರನ್ನು ಚಿಕ್ಕಿಗಳು ಚಾಲೂ ಇಟ್ಟುವು. ಮನುಷ್ಯರ ಬದುಕಿನ ಆಗು ಹೋಗುಗಳ ಪರಿವಿಲ್ಲದೆ, ಅವರ ನೋವು ನಲಿವುಗಳಿಗೆ ಸೊಪ್ಪು ಹಾಕದೆ. ಅವರ ಹಿಗ್ಗು ಜಗ್ಗುಗಳಿಗೆ ಕ್ಯಾರೆ ಅನ್ನದೆ ಸಮಯ ತನ್ನಷ್ಟಕ್ಕೆ ತಾನು, ತನ್ನದೇ ಎಂದಿನ ಗತಿಯಲ್ಲಿ ಮುಂದೆ ಸರಿಯುತ್ತಲೇ ಇತ್ತು.

ಕಾಶಿಗೆ ಈಗ ಯಾವ ಜಂಜಾಟವೂ, ಜವಾಬ್ದಾರಿಯೂ ಇರಲಿಲ್ಲ. ತನ್ನ ಹೊಟ್ಟೆ ತುಂಬಿಸಿಕೊಳ್ಳುವುದೇನೂ ದೊಡ್ಡ ಮಾತಾಗಿರಲಿಲ್ಲ. ಉಳ್ಳವರ ಹೊಲಗಳಲ್ಲಿ ದುಡಿತ, ಸಿಕ್ಕಿದ್ದನ್ನು ತನ್ನ ಕೇರಿಯ ಬಡ ಮಂದಿಗೆ ಹಂಚಿ ತಿನ್ನುವ ಅವಳ ಚಟ ಎಲ್ಲರನ್ನೂ ಹತ್ತಿರಕ್ಕೆಳೆಯಿತು. ಬಡ ಬಗ್ಗರ ಬಗ್ಗೆ, ಬೇನೆ ಬೇಸರಿಕೆಯವರ ಬಗ್ಗೆ ಕೈಲಾಗದ ಮುಪ್ಪಾನ ಮುದುಕರ ಬಗ್ಗೆ ಕಾಶಿ ಕಾಳಕೆಯಿಂದ ಅವರಿಗೆ ನೆರವಾಗುತ್ತಿದ್ದಳು. ತನ್ನ ಸೇವೆಯಿಂದ, ಸಹಾಯ, ಪ್ರೀತಿಯಿಂದ, ಕರುಣೆಯಿಂದ ಕಾಶಿ ಜನರಿಗೆ ಹತ್ತಿರ ಹತ್ತಿರವಾಗುತ್ತ ನಡೆದು ಮಂದಿಯ ಮನದಲ್ಲಿ ಮನೆ ಮಾಡಿದಳು.

ವಾರಕ್ಕೊಂದು ದಿನ ಹಳ್ಳಿಯ ಕೆಂಚಮ್ಮನ ಗುಡಿಯಲ್ಲಿ ಅಕ್ಕನ ಬಳಗ ಸೇರುತ್ತಿತ್ತು. ಗಲ್ಲಿಯ ಹತ್ತಾರು ಹೆಂಗಸರು ಕಾಶಿಯನ್ನು ಆ ಮಹಿಳಾ ಸಂಘದ ಅಧ್ಯಕ್ಷಳನ್ನಾಗಿ ಮಾಡಿದರು. ಭಜನೆಯ ಪದಗಳನ್ನು ಹಾಡುವುದು. ಅವರ ಕಾರ್ಯಕ್ರಮಗಳಲ್ಲಿ ಒಂದಾಗಿತ್ತು. ರಾತ್ರಿ ಶಾಲೆಯಲ್ಲಿ ಅವರೆಲ್ಲ ಎರಡಕ್ಷರ ಕಲಿತಿದ್ದರು. ಎಲ್ಲರಿಗೂ ತಮ್ಮ ತಮ್ಮ ಹೆಸರು ಬರೆಯಲು ಬರುತ್ತಿತ್ತು.

ಇಂಥವೇ ದಿನಗಳಲ್ಲಿ ಸರಕಾರ ಪಂಚಾಯತ ಚುನಾವಣೆ ಘೋಷಿಸಿತು. ಹಳ್ಳಿಗರ ದಿನನಿತ್ಯದ ವಹಿವಾಟಿನಲ್ಲಿ ಚುನಾವಣೆಯ ಬಿಸಿ ಹಬ್ಬಿಸಿತು. ಪರಿಶಿಷ್ಟ ವರ್ಗದ ಮಂದಿಗೆ ಮೀಸಲು ಕ್ಷೇತ್ರವಾಗಿ ಈ ಹಳ್ಳಿ ಸಾರಲ್ಪಟ್ಟಿತು.

ಅಕ್ಕನ ಬಳಗದ ಮೀಟಿಂಗಿನಲ್ಲಿ ಎಲ್ಲ ಸದಸ್ಯರೂ ಒಂದು ಠರಾವು ಪಾಸು ಮಾಡಿದರು. ಅದು–ಕಾಶಿ ಪಂಚಾಯ್ತಿ ಇಲೆಕ್ಷನ್ನಿಗೆ ನಿಲ್ಲಬೇಕು ಎಂದು. ಕಾಶಿಗೆ ಇದು ಸ್ವಲ್ಪವೂ ಇಷ್ಟವಿರಲಿಲ್ಲ. "ಈ ಇಲೆಕ್ಷನ್ನು ಪಲೆಕ್ಷನ್ನು ನನ್ ಮದಡ ತಲಿಗಿ ಹತ್ತಿಂಗಿಲ್ರೆವ್ವೋ... ನನಗ ಈ ರಾಜಕಾರಣದ ತಲಿಬಾಲಾ ತಿಳೆಂಗಿಲ್ಲ, ತಾಳಾಬುಡಾ ಗೊತ್ತಾಗಂಗಿಲ್ಲ. ನನಗಿದೆಲ್ಲಾ ಬ್ಯಾಡ, ನಿಮಗ ಕೈ ಮುಗೀತಿನಿ./ ...." ಅಂತ ಖುಲ್ಲಮ ಖುಲ್ಲಾ ಹೇಳಿಬಿಟ್ಟಳು, ಆದರು ಎಲ್ಲರೂ ವತ್ತಾಯಿಸಿದರು. "ಇನ್ನಾ ಎಂಟು ದಿನಾ ಟೇಮದಾ ಅದಕ್ಕ, ನೀನು ಇಚಾರ ಮಾಡು ಮಗಾ..." ಅಂತ ಗೊಲ್ಲರ ಕರಿಸಿದ್ದವ್ವ ಹೇಳಿದಾಗ ಸಭೆ ಬರ್ಖಾಸ್ತ ಆಯಿತು.

ಮರುದಿನವೇ ಕಾಶಿಗೆ ಹಳ್ಳಿಯ ಮಾಲಿಗೌಡರಿಂದ ಬುಲಾವ್ ಬಂದಿತು. ಬಾಜು ಗುಡಿಸಲಿನ ಗೋಪವ್ವಾಯಿಯನ್ನು ಜೊತೆ ಮಾಡಿಕೊಂಡು ಮಾಲಿಗೌಡರ ಮನೆಗೆ ನಡೆದಳು.

ಗೌಡನ ಪಡಶಾಲೆಯಲ್ಲಿ ಅವನಿಗೆ ಬೇಕಾದ ಉತ್ತಮ ಕುಲದ ನಾಲ್ಕೆಂಟು ಮಂದಿ ಕುಂತಿದ್ದರು. ನಡುವೆ ಘಾಸಲೇಟ ಎಣ್ಣೆಯ ಬಿಜಲಿ ಉರಿಯುತ್ತಿತ್ತು.

ಕಾಶಿ ತಲೆಬಾಗಿಲು ದಾಟಿ ಝೋಳಜಿಯಿಂದ ಒಳಗೆ ಬಂದಾಗ ಗೌಡ ಕರೆದನು. "ಬಾ.... ಬಾ ಕಾಶೀ ... ಈಕಾಡಿ ಬರ್ರಿ......... ಕೂಡ್ರಿ.........."

"ನಮಸ್‌ಕಾರ್ರೀ ಗೋಡಾ......................ನಮಸ್‌ಗಾರ್ರೀ ಎಲ್ಲೋರಿಗಿನೂ....." ಎನ್ನುತ್ತಾ ಅವರಿಬ್ಬರೂ ಬಂದು ಪಡಸಾಲೆಯ ಮೆಟ್ಟಿಲು ಮೇಲೆ ಕುಂತರು.

"ಅಲ್ಯಾಕ ಕೂಡ್ತಿರೇ ಕಾಶೀ............ ಗೋರವ್ವಾ............. ಮ್ಯಾಲ ಬರ್ರೆಲಾ.......... ಏಳ್ರೀ..........ಮ್ಯಾಲ ಬಾರೇ ನಿನ್ನವ್ವನಾ ಮುದಕೀ............." ಅಂತ ಗೌಡ ಗೋರವ್ವಾಯಿಯನ್ನು ಕರೆದನು. "ಇಲ್ಲೇ ಇರ್ಲಿ ಬಿಡೋ ನನ್ ತಂದೀ...........ನಿನ್ ಹೊಟ್ಟಿ ಥಣ್ಣಗಿರ್ಲೀ........ನಾವು ನಿನ್ ಸರಿಸಮಾನ ಕೂಡಬಾರ್ದೋ ನನ್ನಪ್ಪಾ.........ಇಲ್ಲೇ ಛಂದದಾ.......ಇದೇ ನಮ್ ಜಾಗಾ............." ಗೋರವ್ವಾಯಿ ನೆಲಕ್ಕೆ ಕೈ ಹಚ್ಚಿ ಸೆಣಮಾಡುತ್ತ ನುಡಿದಳು.

"ನೋಡ್ರಿ ಸಾವ್ಕಾರಾ.... ಈ ಮುದುಕಿ ತೆಲ್ಯಾಗಿಂದ ಹಿಂತಾದ್ದೆಲ್ಲಾ, ನಾವು ಹ್ಯಾಂಗ ತಗಿಬೇಕು ಹೇಳ್ರೀ...........ಈ ಮಂದೀಗಿ ಎಷ್ಟು ತಿಳ್ಸಿ ಹೇಳ್ದರನೂ ತಿಳೆಂಗಿಲ್ಲಾ ನಿಮಗ? ನಿಮ್ಲೂ ಡಿಗ್ರಿ ಭಾಳ ಬಡಾಸ್ತು ಬಿಡ್ರಿ, ಮ್ಯಾಲ ಬಂದು ಕೂಡ್ರೀ........" ಮತ್ತೊಬ್ಬ ದನಿ ಸೇರಿಸಿದನು. ಅವರಿಬ್ಬರೂ ಎದ್ದು ಬಂದು ಜಮಖಾನೆಯ ತುದಿಗೆ ಕುಂಡಿಯಾನಿಸಿದರು.

ತುಸು ಹೊತ್ತಿನ ನಂತರ ಗೌಡ ಮಾತು ನಡೆಸಿದ.

"ಕಾಶೀ...ಈ ಪಂಚಾಯ್ತಿ ಎಲೆಕ್ಷನ್ನಕ್ಕ ನಾವೆಲ್ಲಾ ಕೂಡಿ, ನಿನಗ ನಿಂದರಸ್ಬೇಕಂತ ನಿಸ್ಚಾ ಮಾಡೀವಿ. ಮನ್ಯಾಗ ಹೆಂಗಸರ್ದೂ ಇದೇ ಮಾತದಾ...... ನಿಮ್ಮ 'ಅಕ್ಕನ ಬಳಗ' ದ ಹೆಂಗಸ್ರೆಲ್ಲಾ ಹೇಳದರನೂ ನೀ ಒಪ್ಗೊಂಡಿಲ್ಲಂತ ತಿಳೀತು, ಈಗಾ ಕಾಶೀ...... ನೀ ಎಲೆಕ್ಷನ್ನಿಗನಿಂದರಲೇ ಬೇಕು ನೋಡೂ.... ನಮ್ಮ್ ಪಾರ್ಟಿಲಿಂದ ಈ ಸರ್ತಿ ನೀನೇ ನಿಂದರಬೇಕು...... " ನಿಧಾನವಾಗಿ ನಿಶ್ಚಯದ ದನಿಯಲ್ಲಿ ಹೇಳಿದನು ಗೌಡ, "ಇದೆಲ್ಲಾ ನನಗ ತಿಳೆಂಗಿಲ್ರಿ ಗೋಡಾ.... ಬ್ಯಾಡ್ರೀ..." ಕಾಶಿ ವಿನಯದಿಂದ ಹೇಳಿದಳು. "ನಾವಿದ್ದೀವಲ್ಲ, ಎಲ್ಲಾ ನೋಡ್ಕೋತಿವೆಂತ.... ಇದರಾಗ ತಿಳಿಲಾರ್ದು ಏನೂ ಇಲ್ಲ. ಒಮ್ಮಿ ನಿಂತು ಗೆದ್ದು ಬಂದಿ ಅಂದ್ರ ಮುಂದ ಎಲ್ಲಾ ನಿನಗೇ ತಿಳೀತದ.......ನೀವೆಲ್ಲಾ 'ಅಕ್ಕನ ಬಳಗಾ' ಕಟಗೊಂಡು ಭಾಳ ಛಲೋ ಕೆಲ್ಸಾ ಮಾಡ್ಲಕತ್ತೀರಿ. ಅದರಾಗಂತೂ ನಿನ್ನ ಹೆಸರ

ಎಲ್ಲೋರ ಬಾಯಾಗ ಅದಾ ಏನವಾ ..... ನಿನಗ ಸಂಸಾರದ ಜಂಜಾಟಿಲ್ಲ.ಮಕ್ಕಳು ಮರಿ ಅಂತ ಗೋಜಿಲ್ಲ, ಗಂಡನ ತಕರಾರಿಲ್ಲ. ನೀನೇ ಪಂಚಾಯ್ತಿ ಮೆಂಬರಾದಿ ಅಂದ್ರ ಇನ್ನಾ ಜಾಸ್ತಿಯಾಗಿ ಮಂದೀಗಿ ಭಲೋ ಕೆಲ್ಸಾ ಮಾಡ ಭೌದು. ನಿನ್ ಹಿಂದ ಸರಕಾರದ ಸೌವಲತ್ತುಗೋಳು ಇರ್ತಾವ. ಫಂಡಿನ ರೊಕ್ಕಾ ರುಪ್ಯೆ ಇರ್ತದ. ಮತ್ತ ನಾವೆಲ್ಲೋರೂ ನಿನ್ ಹಿಂದ ಇರ್ತೀವಿ, ನೀ ಹೂಂ ಅಂದ್ರ ಸಾಕು. ಉಳದದ್ದೆಲ್ಲಾ ನಾವು ನೋಡ್ಕೋತೀವಿ...."

"ನನ್ ಬಲ್ಲಿ ರೊಕ್ಕಾ ರುಪ್ಯೆ ಇಲ್ರೀ... ಎಲೆಕ್ಷನ್ ಅಂದ್ರ ಭಾಳ ರೊಕ್ಕಾ ಬೇಕಾಗ್ತದಂತ..."

ಹೆಂತಾ ಹುಚ್ಚಿದ್ದೀ ನೀ ಅಂತೀನಿ.... ನೋಡ್ರೆಪಾ ಕೇಳ್ರಿ ಕಾಶಿ ಮಾತ...... ಅದೆಲ್ಲಾ ಬ್ಯಾಡಂತೀದಿ..... " ಗೌಡ ಮಾತಿನ ಸಿಲ್‌ಸಿಲಾ ಜಾರಿಯಲ್ಲಿರಿಸಿದ.

"ಆ ಚಿಂತಿ ನಿನಗ ಬ್ಯಾಡ ಕಾಶೀ .... ಅದರದೆಲ್ಲಾ ಖರ್ಚು ಗೋಡ್ರು ನೋಡ್ಕೋತಾರ. ನಿನ್ ಮ್ಯಾಲ ಒಂದ್ ದಮಡಿ ಖರ್ಚುನೂ ಬೀಳಂಗಿಲ್ಲ," ದೊಡ್ಡಮನಿ ಗಂಗಣ್ಣ ಹೇಳಿದನು. "ನೀ ಸುಮ್ಮನ ಹೂಂ ಅನ್ನು ಕಾಶೀ...... ನಾವೆಲ್ಲಾ ಖರ್ಚು ಮಾಡ್ತೀವಿ. ಇವನವ್ವನಾ .... ಈ ನಮ್ಮ ಕ್ಷೇತ್ರ 'ಮೀಸಲು ಕ್ಷೇತ್ರ' ಅಂತ ಮಾಡ್ಯಾರಲ್ಲ. ಈ ಹೊಲಮಾದ್ರು ಬ್ಯಾಡ್ರು ಲಮಾಣೇರ ಮಂದ್ಯಾಗ ನಮಗ ಭಲೋ ಕ್ಯಾಂಡೇಟೀ ಸಿಗಂಗಿಲ್ಲ. ಅದರಾಗ ನಮ್ಮ ಪರ್ಟಿಲಿಂದ ಹೆಣ್ಣ ಮಕ್ಕಳಿಗೇ ನಿಂದರಸ್ಬೇಕಂತ ಹುಕುಂ ಆಗ್ಯಾದ. ನಿನಗ ಬಿಟ್ಟಿರ ನಿಮ್ಮಂದ್ಯಾಗ ಬ್ಯಾರ ಯಾರೂ ಶಾಣ್ಯಾ ಹೆಂಗಸ್ರು ಇಲ್ಲ ನೋಡು. ಎಲ್ಲಾ ರೀತಿಯಿಂದ ನೀನೇ ಲಾಯಕ್ಕಿದ್ದಿ ನೋಡು.... ನೀ ಹೂಂ ಅನ್ನು.......

ಕಾಶಿ ತಲೆಯೆತ್ತಿದಳು. "ಆಗಲ್ರಿ ಗೋಡ್ರಾ.... ಅದರ ನನಗೇನೂ ಇದರಾಗ ತಿಳೆಂಗಿಲಲ್ ನೋಡ್ರೀ.... ಎಲ್ಲಾನೂ ನೀವೇ ಮಾಡ್ಬೇಕು, ಸುಮ್ಮ ಹೆಸರ ಆಟೀ ನಂದು ನೋಡ್ರೀ ಎಂದಳು.

"ಅದರ ಚಿಂತಿ ಬಿಡು ನೀ... ಆಯ್ತಲ್ರಿ ಗೌಡ್ರೇ..... ಕಾಶಿ ನಿಮ್ಮಾತ ಗೆದ್ದಸದ್ದು ಬಿಡ್ರಿ....ಮುಂದಿನ ಬೇಸ್ತಾರ ಭಲೋ ದಿನಾ ಅದಾ.... ಅಂದೇ ನಾಮಪತ್ರ ಹಾಕ್ಸಿಬಿಡ್ರೀ....." ಐಗೋಳ ಮಲ್ಲಯ್ಯ ನಗು ದನಿಯಲ್ಲಿ ನುಡದ.

ಚಹಾ ಪಾಣಿ ಆಯ್ತು. ಗೋಡ್ತಿಯೂ ಬಂದು ಕಾಶಿಯನ್ನು ಮಾತಾಡಿಸಿದಳು.

ಕಾಶಿ, ಗೋರವ್ವಾಯಿಯರು ಮನೆಗೆ ಬಂದಾಗ ಕೇರಿಯ ಹಿರಿಯರು ಅಂಗಳದಲ್ಲಿ ಕುಂತಿದ್ದರು ಸುದ್ದಿ ತಿಳಿದು ಎಲ್ಲರೂ ಖುಷಿಪಟ್ಟರು.

ಹಿಂದೆ ಈಟೆಲ್ಲಾ ಹುನ್ನಾರು ನಡೆದು ಕಾಶಿ ಅಂದು ಚುನಾವಣೆಗೆ ಸ್ಪರ್ಧಿಸಿ ನಾಮಪತ್ರ ಸಲ್ಲಿಸಿ ಬಂದಳು. ಅಂದೇ ಅವಳ ಮಾಜಿ ಗಂಡನೂ ಅವಳ ವಿರುದ್ಧ ಪಾರ್ಟಿಯಿಂದ ತನ್ನ ನಾಮಪತ್ರ ಸಲ್ಲಿಸಿದ್ದನು.

ಗಂಡೆಪ್ಪನ ಹಿಂದೆಯೂ ಹಳ್ಳಿಯ ಕೆಲ ಮುಖಂಡರಿದ್ದರು, ಬಡ್ಡಿ ಸಾವ್ಕಾರ ಚಂದ್ರಶೇಟ್ಟಿ, ಪೊಲೀಸ ಪಾಟೀಲ ನಾಗಿಂದ್ರಪ್ಪ, ಮಟಕಾ ಕಿಂಗ್ ಮಾಂತಪ್ಪ, ಅರಕ್ ಶಾಪಿನ ಕರೀಮ ಸಾಬಿ ಅಂತ ಗಟ್ಟಿ ಅಸಾಮಿಗಳು ಗಂಡೆಪ್ಪನನ್ನು ಹುರಿದುಂಬಿಸಿ ಅವನಿಗೆ ಮೂಗಿಗೆ ಬರುವವರೆಗೆ ಕುಡಿಸಿ ಚುನಾವಣೆಯ ಕಣಕ್ಕೆ ಇಳಿಸಿದ್ದರು.

ನಾಮಪತ್ರ ಹಿಂದೆ ತೆಗೆದುಕೊಳ್ಳುವ ಹಿಂದಿನ ದಿನ ಅದು. ಕಾಶಿ ಅಂದು ಸಾವ್ಕಾರ ಶಾಣಪ್ಪನ ಮಡ್ಡಿ ಹೊಲಕ್ಕೆ ಕೆಲಸಕ್ಕೆ ಹೋಗಿದ್ದಳು,ಕೆಲಸ ಮುಗಿದು ಕೂಲಿ ಅಳೆಸಿಕೊಳ್ಳುವಾಗಲೇ ಹೊತ್ತಿನ ಮಾರಿಗೆ ಕೆಂಪುಮೆತ್ತಿತ್ತು. ಹೊಲದೊಳಗಿನ ಮುಂದೆಲ್ಲ ಹೊರಟು ಹೋಗಿದ್ದರು. ಹೆಂಗಸರು ಯಾರೂ ಅವಳ ಜೋಡಿ ಇರಲಿಲ್ಲ.

ಕಾಶಿ ಕೂಲಿಯ ಗಂಟನ್ನು ತಲೆಯ ಮೇಲಿಟ್ಟುಕೊಂಡು ಹಳ್ಳಿಯ ದಾರಿ ಹಿಡಿದು ಹೊರಟಾಗ ಹೊತ್ತು ಮುಳುಗಿ ಆಕಾಶದ ತುಂಬಾ ಕುಂಕುಮ ಚೆಲ್ಲಾಡಿತ್ತು. ಅದೇ ಆಗ ಚಿಗುರುತ್ತಿರುವ ಬೆಳದಿಂಗಳ ಮಸಕು ಬೆಳಕಿನಲ್ಲಿ ಕಾಶಿ ಬಿರಬಿರನೆ ಹೆಜ್ಜೆ ಹಾಕುತ್ತ ಊರ ದಾರಿ ಹಿಡಿದಿದ್ದಳು. ದಾರಿಯ ಇಬ್ಬದಿಗೂ ದಟ್ಟವಾಗಿ ಬೆಳೆದು ನಿಂತು ಕಿರ್ರೆನ್ನುವ ಲಕ್ಕಿ ಪೊದೆಗಳು. ಹಳ್ಳಿ ಹತ್ತಿರವಾಗುತ್ತ ಊರ ಮುಂದಿನ ಹಣಮಂದೇವರ ಗುಡಿಯ ಕಳಸ ಕಾಣಿಸಿ, ಅವಳು ದಾರಿಯ ತಿರುವಿನಲ್ಲಿ ತಿರುಗಿದಾಗಲೇ, ತಟ್ಟನೆ ಹಿಂದಿನಿಂದ "ಕಾಶೀ.... ಒಂದೀಟು ನಿಂದ್ರೇ...." ಎನ್ನುವ ಗಂಡು ದನಿ ಬಾಜುವಿನ ಪೊದೆಯಿಂದ ತೂರಿಬಂದಿತು. "ಯಾರವ್ರು?" ಅನ್ನುತ್ತಾ ಅವಳು ತಿರುಗುವಷ್ಟರಲ್ಲಿ ಪೊದೆಯಿಂದ ಹೊರಬಂದ ಗಂಡೆಪ್ಪ ಅವಳ ಹತ್ತಿರ ಸರಿದ.

ಹತ್ತು ವರ್ಷಗಳ ಹಿಂದೆ ತನಗೆ ಗಂಡನಾಗಿದ್ದ ತನ್ನನ್ನಾಳಿದ್ದ ಗಂಡೆಪ್ಪ ಈ ದಿನಗಳಲ್ಲಿ ಅವಳಿಗೆ ಏನೂ ಆಗದಿದ್ದರೂ ಅಪರಿಚಿತನಂತೂ ಆಗಿರಲಿಲ್ಲ. ಒಂದೇ ಊರು, ಒಂದೇ ಕೇರಿ, ಹೊಲ ತೋಟ, ಕೂಲಿ ನಾಲಿ, ಸಂತಿ ಪ್ಯಾಟಿ ಅಂತ ತಿರುಗಾಡುವಾಗಲೆಲ್ಲ ಆಗಾಗ ಇಬ್ಬರೂ ಎದುರಾಬದರಾಗುತ್ತಿದ್ದರು. ಆದರೆ ಇಬ್ಬರೂ ಬೇರೆ ದಾರಿಗೆ ತಿರುಗಿಕೊಂಡು ಹೋಗುತ್ತಿದ್ದರೇ ವಿನಃ ಮಾತಾಡುತ್ತಿರಲಿಲ್ಲ. ದೂರದಿಂದ ಒಬ್ಬರನ್ನೊಬ್ಬರು ನೋಡಿದರೂ ಹತ್ತಿರ ಬಂದಾಗ ಕಣ್ಣು ತಪ್ಪಿಸುತ್ತಿದ್ದರು. ಇಬ್ಬರ ಎದೆಗಳ ಒಳಗಿನ ಹೃದಯಗಳು ಬರಗಾಲದ ನೆಲದಂತೆ ಒಣಗಿ ಬಿರುಕುಬಿಟ್ಟು ಅಲ್ಲಿಯ ಭಾವನೆಗಳೆಲ್ಲ ಸುಟ್ಟು ಕರಕಾಗಿದ್ದುವು. ಹಾಗೆ ನೋಡಿದರೆ ಹಲವು ಹದಿನೆಂಟು ಹೆಣ್ಣುಗಳ ರುಚಿ ಕಂಡಿದ್ದ ಕಚ್ಚೆ ಹರುಕ ಗಂಡೆಪ್ಪನಿಗೆ ಹೆಂಡತಿ ಮತ್ತು ಸೂಳೆಯರ ನಡುವಿನ ವ್ಯತ್ಯಾಸೇ ಗೊತ್ತಾಗಿರಲಿಲ್ಲ. ಅಂದೂ ಅಷ್ಟೇ. ಇಂದೂ ಅಷ್ಟೇ, ಹತ್ತು ವರ್ಷಗಳಿಂದ ಇಬ್ಬರೂ ಒಬ್ಬರಿಗೊಬ್ಬರು ಬರೀ ಕಗ್ಗಲ್ಲುಗಳಾಗಿ ನಿಂತಿದ್ದರು. ಆದರೆ ಈಗ ಏಕದಂ ಅವನು, ಕತ್ತಲೆಯ ಮಸಕು ಬೆಳಕಿನಲ್ಲಿ, ಯಾರೂ ಇಲ್ಲದ ದಾರಿಯ ತಿರುವಿನಲ್ಲಿ ಅವಳ ಹೆಸರು ಹಿಡಿದು ಕರೆದು ತರುಬಿ ನಿಲ್ಲಿಸಿದಾಗ ಕಾಶಿ ಒಳಗೊಳಗೇ ಅಂಜಿದಳಾದರೂ ಗಟ್ಟಿಯಾಗಿ ನಿಂತುಬಿಟ್ಟಳು. ಅವನೇ ಮಾತು ಬಾಗಿಸಿದನು.

"ಕಾಶೀ.... ನಾಳಿಗಿ ಎಲೆಕ್ಷನ್‌ದಾಗಿನ ನಿನ್ ಹೆಸರ ವಾಪಸ ತಗೋಬೇಕು ನೀ. ನನ್ನ ವಿರುದ್ಧ ನಿಂತು ಎಲೆಕ್ಷನ್ ಲಡಾಸಲಕ್ಕ ಏಟು ಧೈರ್ಯ ನಿನಗ? ನಾ ಹೇಳಿದ್ಹಾಂಗ ಕೇಳು. ನಿನ್ನ ಹೆಸರ ಹಿಂದಕ್ಕ ತಗೋಮಾದು ನಿನಗೇ ಹಿತ ಅಂತ ತಿಳ್ಕೋ...."

"ಇದೇ ಹೇಳಾಕ ನೀ ಹಿಂಗ್ ಲಕ್ಕಿ ಪೊದ್ಯಾಗ ಅಡಕ್ಕೊಂಡು

ಕುಂಡು ನನ್ ದಾರಿ ಕಾಯ್ಲಿಕ್ಹತ್ತಿದ್ದೇನು? ನಾ ನನ್ ಹೆಸರ ವಾಪಸ್ ತಗೊಳಲ್ಲಂದ್ರ ಏನು ಮಾಡಾಂವ ನಿ?"

ಕಾಶಿ ಧೈರ್ಯ ತಂದುಕೊಂಡು ಕೇಳಿದಳು. ಗೆಂಡೆಪ್ಪನಿಗೆ ಸಿಟ್ಟೇರಿತು.

"ಏಯ್..... ನಾ ಹೇಳಿದ್ಹಾಂಗ ಕೇಳು..... ಅಬ್ಬರಿಸಿದ.

"ನೀ ಯಾಂವನೋ ನನ್ ಮ್ಯಾಲ ಹುಕುಂ ಮಾಡ್ಲಕ್ಕ ? ನಾ ನಿನ್ ಮುಂದ ಎಲೆಕ್ಷನ್ನಕ್ಕ ನಿಂತರ ನೀ ಸೋಲ್ತಿ ಅಂತ ಅಂಜಕಿ ಅಗ್ಯಾದ ಕಾಣಸ್ತದ, ನಿನಗ"

"ನನಗೇನೂ ಅಂಜಿಕಿ ಇಲ್ಲೇ ನಿನ್ನವ್ವನಾ ..... ಮಾಮೂಲ ಒಂದ ಹೆಣ್ಣಿಗಿ ಅಂಜಂಗಿಲ್ಲ ನಾ, ನೀ ಬಿಟ್ಟು ನಿಮ್ಮಪ್ಪ ನಿಂತರನೂ ನಂದೇನೂ ಒಂಕ ಮಾಡಂಗಿಲ್ಲಂತ ತಳ್ಕೋ .... ಸುಮ್ಮನ ಇಜ್ಜತಲಿಂದ ಹೇಳಾದು ಕೇಳು. ಗಂಡಾ ಹೆಣ್ತಿ ಎದುರಾಬದರಾ ನಿಂತು ಎಲೆಕ್ಷನ್ನ ಲಡಾಸಲಕ್ಹತ್ತಾರಂದ್ರ ನಮ್ ಕಿಮ್ಮತ್ತೇನು ಉಳೀತದ?"

ಏನಂದಿ ? ನಾವೆಲ್ಲಿ ಗಂಡಾ ಹೆಣ್ತೆನೋ ಈಗಾ? ಒಂದೇ ನನಗೆ ಹೆಣ್ತಿ ಗಿಣ್ತಿ ಅಂದ್ರ ಛಲೋ ಆಗಂಗಿಲ್ಲ ನೋಡು, ಆ ಸಂಬಂಧ ಕಡ್ದು ಹಡ್ತೋಸ ಆಯ್ತು. ಸುಮ್ನೆ ದಾರಿ ಬಿಟ್ಟು ದೂರ ಸರಿ" ಎಂದವಳೆ ಬಾಜು ಹಾದು ಮುಂದೆ ನಡೆದಳು.

"ನಿನ್ನವ್ವನ ನಿನಗೆ ಈಟು ಸೊಕ್ಕದಾಯೇನೇ ಭೋಸಡೀ.......... ನಿನ್ ಸೊಕ್ಕದಾಯೇನೇ ಭೋಸಡೀ........ ನಿನ್ ಸೊಕ್ಕ ಮುರೀಲಿಲ್ಲಂದ್ರ ನೋಡು ಯಾ ಮಿಂಡಗಾರನಲಿಂದ ನಿನಗಿಟು ಹಿಮ್ಮತ ಬಂದಾದಂತ ನಾನೂ ನೋಡ್ತಿನಿ..... ಹಾದರಗಿತ್ತೀ......."

ಎಂದು ಬೈಯುತ್ತ ಅವಳಿಗೆ ವಿರುದ್ಧ ಹಾದಿಯಲ್ಲಿ ಧಪ ಧಪನೆ ನಡೆದು ಹೋದನು.

ಕಾಶಿ ಮಾಲಿಗೌಡರಿಗೆ ಈ ಸುದ್ದಿ ಮುಟ್ಟಿಸಿದಳು.

"ನೀ ಏನೂ ನಿನ್ ಹೆಸರ ವಾಪಸ್ ತಗೋಬ್ಯಾಡ ಕಾಶೀ.... ಈ ಎಲೆಕ್ಷನ್ನದಾಗೆ ಅಂವಾ ಸೋಲ್ತಾನಂತ ಖಾತರಿ ಆಗ್ಯಾದ ಅವ್ವೀಗಿ..... ನೀ ಸುಮ್ಮಿರು, ನಾವೆಲ್ಲಾ ನೋಡ್ಕೋತಿವಿ..........." ಅಂತ ಹೇಳಿ ಕಳಿಸಿದನು.

ಮೊದಲೆ ಹಳ್ಳಿ ಊರದು. ಎಲ್ಲಾ ಹಳ್ಳಿಯೊಳಗಿರುವಂತೆ, ಇಲ್ಲಿಯೂ ದೋಪಾರ್ಟಿಗಳಿದ್ದುವು. ಪೋಲಿಸ ಗೌಡ ಮತ್ತು ಅವನ ಪಟಾಲಂ ಒಂದು ಪಾರ್ಟಿಯಾದರೆ ಇನ್ನೊಂದು ಪಾರ್ಟಿ ಮಾಲಿ ಪಾಟೀಲ ಮತ್ತವನ ಮಂದಿಯದು. ಈ ಹಳ್ಳಿ ಮೀಸಲು ಕ್ಷೇತ್ರವಾಗಿರದಿದ್ದಲ್ಲಿ ಅವರೇ ಗ್ಯಾರಂಟಿಯಾಗಿ ಎದುರಾವದರಾಗಿ ಎಲೆಕ್ಷನ್‌ಗೆ ನಿಂತು ಕುಸ್ತಿಗಿಳಿಯುತ್ತಿದ್ದರು. ಆದರೆ ಈಗ ತಮ್ಮ ತಮ್ಮ ಕಡೆಯ ದಲಿತರನ್ನು ನಿಲ್ಲಿಸಿ ಹಲ್ಲು ಮಸೆಯುತ್ತಿದ್ದರು. ವಿದ್ಯೆ,ಸ್ವಮತ ಬುದ್ಧಿ, ರೊಕ್ಕ ರುಪ್ಯೆ ಏನೂ ಇಲ್ಲದ ಈ ಹೊಲೆಮಾದಿಗ ಹುಂಬ ಮಂದಿಗೆ ಮೇಲ್ಜಾತಿಯ ಈ ದೋಪಾರ್ಟಿ ಮಂದಿಯ ಹಿಕ್ಮತ್ತು ಅರ್ಥವಾಗಿರಲಿಲ್ಲ. ಅವರ ಕೈಯಲ್ಲಿಯ ದಾಳಗಳಾಗಿ ಈ ಮೂರ್ಖರು ಅವರು ನಡೆಸಿದಂತೆ ನಡೆಯತೊಡಗಿದ್ದರು.

ನಾಮಪತ್ರ ಸಲ್ಲಿಸುವ ಕೊನೆಯ ದಿನಾಂಕ ದಾಟಿತು. ಅವುಗಳ ಪರಿಶೀಲನೆಯ ದಿನವೂ ಕಳೆಯಿತು: ಕೊನೆಗೊಂದು ದಿನ ತಹಸೀಲ್ದಾರ ಕಚೇರಿಯಲ್ಲಿ ಮೀಟಿಂಗೂ ಮುಗಿದು ಮರುದಿನ, ಅಂತಿಮಪಟ್ಟಿ ಹೊರಬಿದ್ದಿತು. ಎರಡು ದೊಡ್ಡ ಪಾರ್ಟಿಗಳ ಹುರಿಯಾಳುಗಳಾಗಿ ಗೆಂಡೆಪ್ಪ, ಕಾಶಿಯರು ಚುನಾವಣೆಯ ಕಣಕ್ಕಿಳಿದು ಎದುರಾಬದರಾಗಿ ನಿಂತರು.

ಎಲೆಕ್ಷನ್ ಹತ್ತಿರವಾಗುತ್ತಿತ್ತು. ಪ್ರಚಾರಕ್ಕೆ ಬಿಸಿಯೇರುತ್ತಿತ್ತು. ಹೆಂಡ, ಖಂಡ, ಹಣ, ಹೆಣ್ಣುಗಳನ್ನೆಲ್ಲ ಪ್ರಚಾರಕ್ಕೆ ಬಳಸಿಕೊಳ್ಳಲಾಗುತ್ತಿತ್ತು. ಪೊಲೀಸ್ ಗೌಡರ ಕೈಯಲ್ಲಿದ್ದ ಗೆಂಡೆಪ್ಪ ಹಗಲೂ ರಾತ್ರಿ ಕುಡಿದ ನಿಶೆಯಲ್ಲಿಯೇ ಇರುತ್ತಿದ್ದ.

ಈ ಕಡೆ ಕಾಶಿಯ ಕಡೆಗಿದ್ದವರು ಮಾಲಿ ಪಾಟೀಲರು. ಹಳ್ಳಿಯ ಎಲ್ಲ ಹೆಂಗಸರೂ ಕಾಶಿಯ ಕಡೆಗೆಯೇ ನಿಂತರು. ಮನೆ ಮನೆಗೆ ನಡೆದು ಹೋಗಿ ಹೆಂಗಸರೆಲ್ಲ ಕಾಶಿಯ ಕಡೆಗೆ ಮಂದಿಯನ್ನು ಒಲಿಸಿಕೊಳ್ಳತೊಡಗಿದರು. ಎಲ್ಲ ಮಂದಿಯ ಬಾಯಲ್ಲಿ ಕಾಶಿಯದೇ ಮಾತು, ಅವಳ ಪಾರ್ಟಿಯ ಚಿನ್ಹೆಯಾದ 'ರೊಟ್ಟಿ' ಯದೇ ಚರ್ಚೆ.

"ರೊಟ್ಟಿ ಇಲ್ಲಂದ್ರ ಹೊಟ್ಟಿ ಹ್ಯಾಂಗ ತುಂಬ್ತದ? ಹೊಟ್ಟಿ ತುಂಬಲಿಲ್ಲಂದ್ರ ಮನಶ್ಯಾರು ಹ್ಯಾಂಗ ಜಿಂವದಲಿಂದ ಬದಕಲಕ್ಕ ಸಾಧ್ಯ ಆಗ್ತದ? ನಾವೆಲ್ಲಾ ಈಟು ದುಡ್ಡಾದು ಈ ಒಂತುತ್ತ 'ರೊಟ್ಟಿ' ಸಲ್ಯಾಕೇ ಅಲ್ಲೇನು? ಹೊಲದಾಗ ಜ್ವಾಳಾ ಬಿತ್ತಿ ಬೆಳ್ಯಾದೆಲ್ಲಾ ಇದೇ ಹೊಟ್ಟಿ ಸಲ್ಯಾಕೇ, ರೊಟ್ಟಿ ಜಿಂದಾಬಾದ..... ಜಿಂದಾಬಾದ...... ಕಾಶಿಬಾಯಿಗೇ ಹೋಟು ಹಾಕ್ರಿ ..... ಅಣ್ಣ ತಮ್ಮದೇರೇ..... ಅಕ್ಕತಂಗಿದೇರೇ..... ರೊಟ್ಟಿಗಿ ದೂರ ಮಾಡ ಬ್ಯಾಡ್ರೀ..... ಈಗ ಧಾಬಾರಾ ವರ್ಸಲಿಂದ ಬರಗಾಲ ಬಂದೂ ಬಂದೂ ನಮಗ ರೊಟ್ಟಿ ಕಿಮ್ಮತ್ತ ತಿಳ್ಸಿಕೊಟ್ಟಾದ. ರೊಟ್ಟಿ ಬೇಕು ನಮಗ ರೊಟ್ಟಿ ಬೇಕು.... ನೋಟ ಬ್ಯಾಡ ರೊಟ್ಟೀನೇ ನಮ್ ದೇವರ ..... ರೊಟ್ಟೀಗೇ ಹೋಟ ಹಾಕ್ರೀ.....

ಎನ್ನುತ್ತ ಕಾಶಿಯ ಮಂದಿ ಹಳ್ಳಿಗಳಲ್ಲಿ ಭಾಷಣ ಮಾಡುತ್ತಿದ್ದರು. ಕಾಶಿ ಪ್ರತಿಯೊಂದು ಮನೆ, ಗುಡಿಸಲುಗಳಿಗೂ ಹೋಗಿ ಕೈ ಮುಗಿಯುತ್ತಿದ್ದಳು. ಯಪ್ಪಾ, ಯಣ್ಣಾ, ಯವ್ವಾ , ಯಕ್ಕಾ, ಆಯೀ.ಮುತ್ಯಾ ಅಂತ ಕರೆದು ಎಲ್ಲೋರಿಗೂ ತಲಿಬಾಗಿ, ಮನಕರಗುವಂತೆ ಓಟು ಕೇಳುತ್ತಿದ್ದಳು. ಸೆರಗು ಚಾಚಿ ಓಟಿನ ಬಿಕ್ಷೆ ಬೇಡುತ್ತಿದ್ದಳು. ಕಾಶಿಯಲ್ಲಿ ದರ್ಪವಿರಲಿಲ್ಲ. ಸೊಕ್ಕಿರಲಿಲ್ಲ. ವಿನಯವೇ ಕಾಶಿಯ ಅಸ್ತ್ರವಾಗಿತ್ತು. ಹೆಣ್ಣು ಸಹಜ ಕೋಮಲತೆಯೇ ಅವಳ ಆಕರ್ಷಣೆಯಾಗಿತ್ತು. ಹಳ್ಳಿ ಮಂದಿ ಹಂತ, ಹಂತವಾಗಿ ಅವಳ ಕಡೆಗೆ ಸರಿಯಲರಂಭಿಸಿದರು.

ಎಲೆಕ್ಷನ್ನಿಗೆ ಬರೀ ಮೂರು ದಿನ ಉಳಿದಿತ್ತು. ಅಂದು ರಾತ್ರಿ ಪೊಲೀಸ ಗೋಡನ ತೋಟದಲ್ಲಿ ಅವರ ಪಾರ್ಟಿಯ ಮಂದಿಯ ನಿತ್ಯದ ಸಭೆ ಸೇರಿತ್ತು. ಹೆಂಡ ಖಂಡಗಳು ಸರಬರಾಜು ಆದುವು. ಎಲ್ಲರಿಗೂ ನಿಶೆಯೇರುತ್ತಿತ್ತು. ತಲೆಗೊಂದೊಂದು ಮಾತುಗಳು ಹುಟ್ಟಿ ಹಾರಾಡುತ್ತಿದ್ದುವು.

"ಕಾಶಿ ಕಡೀಗೇ ಹಳ್ಳಿಮಂದೆಲ್ಲಾ ಸರೀಲಕ್ಹತ್ತ್ಯಾದಪೋ ಗೋಡಾ.... ಆಕಿ ಏನು ಮಾಟಾ ಮಡ್ಯಾಳೋ ಏನೋ.... ಎಲ್ಲೋರ ಬಾಯಾಗನೂ ಕಾಶಿ ಕಾಶಿ ಅಂತ ಅಕಿನ ಹೆಸರೇ ಕೇಳಿ ಬರ್ಲಕ್ಹತ್ತ್ಯಾದ, ಎಲ್ಲೋರೂ ರೊಟ್ಟಿ ರೊಟ್ಟಿ ಅಂತ ಬಡ ಬಡಸಲಕ್ಹತ್ತಾರ್‍ರೋ.....

"ಎಲ್ಲೋರೂ ದುಡ್ಯಾದು ರೊಟ್ಟಿ ಸಲ್ಯಾಕೇ, ರೊಟ್ಟಿ ಇದ್ದರೇ ಬದುಕು, ಇಲ್ಲಂದ್ರ ಸಾವು.... ಅಂತ ಅಕಿಕಡಿ ಮಂದಿ ಭಾಷಣಬಿಗೀತಾರಲ್ಲ...."

"ಆಟೀ ಅಲ್ಲೋ ತಮ್ಮಾ.... ಆ ಅಕ್ಕನ ಬಳಗದ ಟೋಳಿ ಹೆಂಗಸ್ರು, ರೊಟ್ಟಿ ಮ್ಯಾಲ, ಕಾಶಿ ಮ್ಯಾಲ ಹಾಡಾನೇ ಕಟ್ಟಿ ಹಾಡ್ಲಕತ್ತಾರಲ್ಲೋ...... ಜತಿಗಿ ತಬಲಾ ಪೇಟಿ, ಚಳ್ಳಾಮ ಬ್ಯಾರೆ ಭಾರಸ್ತಾರ.... "ಈ ರೊಟ್ಟಿ ಆದಾ ಭಾಳ ಮಸ್ತ ಮಸ್ತ ... ಕಾಶಿ ಗಲ್ಲಾಗೋಳು ಅವಾ ಭಾಳ ಮಸ್ತ್ ಮಸ್ತ್ ......"

ಏರಿದ ನಿಶೆಯ ಹುಮ್ಮಸ್ಸಿನಲ್ಲಿ ನಾಯಿಕೋಡಿ ಸೋಮ್ಮಯಾ ದನಿ ತೆಗೆದು ಹಾಡತೊಡಗಿದಾಗ ಐಗೋಳ ಮುರುಗಯ್ಯ ಘರ‍್ಯಂತ ಅವನ ನೆತ್ತಿಗೊಂದು ಗುದ್ದಿ ದಬಾಯಿಸಿದ.

"ಸಾಕು ಸುಮ್ಕಿರೆಲೆ ಸೂಳ್ಯಾಮಗನೇ.....ಸಿನೀಮಾದ ಧಾಟಿ ತಗ್ದು ಹಾಡ್ತಾನ ಮಗಾ.... ನಿನ್ನೋಟಕ್ಕ ನೀವೇ ಹೀರೋ ಆಗಿನೆಂತ ತಿಳ್ಕೊಂಡೆನ್ಲೇ ಸೋಮ್ಯಾ?" ಎಲ್ಲರೂ ಗೊಳ್ಳೆಂದು ನಕ್ಕರು. "ಏ ಗೆಂಡೆಪ್ಪಾ.... ಆ ನಿನ್ ಕಾಶಿಗಿ ಮೆಣಸಲಕ್ಕ ಆಗಾಣಿಲ್ಲೇನೋ ನಿನ್ ಕೈಲಿಂದಾ? ಹೆಂತಾ ಗಂಡಸೋ ನೀನ್ನೋ? ಆ ಮಾಲೀಪಾಟೀಲನ ಧೀಮಾಕ ಭಾಳಾಗ್ಯಾದ. ಕಾಶಿ ಏನರೆ ಎಲೆಕ್ಷನ್‌ದೊಳಗ ಗೆದ್ದಳಂದ್ರ ಮಗನೇ.... ಆ ಮಾಲಿಪಾಟೀಲನ ಮೂಗ ಮ್ಯಾಲಾಗ್ತದ....?

"ಹೋಯಿಂದೋ ಮುತ್ತ .... ನಿನ್ನ್ಹಂತಾ ಹೇಡಿಗಿ ಬೆನ್ನಿಗಿ ಹಾಯ್ಕೊಂಡು ನಮ್ಮ ಗೋಡನ ಮೂಗ ಕೂಯ್ಕೋಳ್ಳಾದಾಗ್ತದೋ ಏನೋ...... ನನ್ನವ್ವನಾ ನೀ ಸೋತರೆ ಸೋಲು ಮಗನೇ .... ಅದರ ಆ ನಿನ್ ಸೋಡಚೀಟಿ ತಗೊಂಡ ಹಣ್ತೆ ಕಾಶಿ ಮಾತರ ಗೆದಿಬಾರ್ದು ನೋಡೂ....

ಹಜಾಮರ ರಾಣ್ಯಾ ಮೀಸೆ ತೀಡಿಕೊಂಡು ಹೇಳಿದ.

"ಇದು ನಮ್ ಇಜ್ಜತ್ತಿನ ಸವಾಲದಾನೋ ಗೆಂಡ್ಯಾ...."

ಗೌಡ ತಾನೆ ಕುಡದುಳಿದಿದ್ದ ವಿಲಾಯತಿ ಸೆರೆಯ ಗಿಲಾಸನ್ನು ಗಂಡ್ಯಾನ ಕೈಗೆ ಕೊಟ್ಟು ಹೇಳಿದ. ಗೆಂಡ್ಯಾ ಗಟ ಗಟನೆ ಅದನ್ನು ದೇವರ ತೀರ್ಥವೆಂಬಂತೆ ಕುಡಿದು ಬಾಯೊರೆಸಿಕೊಂಡು ತಟ್ಟನೆ ಗೋಡನ ಕಾಲು ಹಿಡಿದುಕೊಂಡ

"ಯಪ್ಪಾ ಗೋಡಾ.... ನೀವು ಹೇಳದ್ಹಾಂಗ ಮಾಡಾಂವ ನಾನು, ನೀವು ಹೇಳ್ರೀ.... ಆ ರಂಡಿಗಿ ಹ್ಯಾಂಗ ಸೋಲಸ್ಬೇಕಂತ ಹೇಳ್ರೀ..... ಹಾಂಗ ಮಾಡಲಿಲ್ಲಂದ್ರ ನಾ ನಮ್ಮನ ಬೀಜಕ್ಕೇ ಹುಟ್ಟಿಲ್ಲ... ಹೇಳ್ರೀ ಗೋಡಾ..."

ಗೆಣಡೆಪ್ಪ ನಿಶೆಯಲ್ಲಿ ಗೆಟ್ಟಿಯಾಗಿ ಪಟ್ಟು ಹಿಡಿದು ಕೇಳಿದಾಗ ಗೋಡ ಬೆನ್ನು ಚಪ್ಪರಿಸಿದ. "ಇದೆಲ್ಲಾ ಮುಗೀಲಿ... ಆಮ್ಯಾಲ ಹೇಳ್ತೀನೆಂತ... ನಾ ಹೇಳಿದ್ಹಾಂಗ ಮಾಡ್ಬೇಕಾ ಮತ್ತ... ನಾ ಹೇಳಿನ್ತೆಂತ ಯಾರ ಮುಂದಾದ್ರೂ ಬಾಯಿಬಿಟ್ಟಿ ಅಂದ್ರ, ನಿನ್ನವನಾ ಗೆಂಡ್ಯಾ... ನಿನ್ ನಾಲಿಗಿ ಕಡ್ಸಿ ಹಾಕ್ತೀನಿ, " ಅಂತಲೂ ಎಚ್ಚರಿಸಿದ.

ಹಳ್ಳಿಯ ನೆತ್ತಿಯ ಮೇಲೆ ನೆತ್ತರು ಚೆಲ್ಲಾಡಿದಂತೆ ಬೆಳಗಾಯಿತು, ಗಿಡ ಗಂಟೆಗಳ ಕುತ್ತಿಗೆಗಪ್ಪಿಕೊಂಡು ಕುಂತಿದ್ದ ಹಕ್ಕಿಪಕ್ಕಿಗಳೆಲ್ಲ ಕುಂಡಿಗೆ ಬೆಂಕಿ ಹತ್ತಿದಂತೆ ಲಬೋ ಲಬೋ ಎಂದು ಹೊಯ್ಕೊಳ್ಳುತ್ತ ಆಕಾಸದ ಕಡೆಗೆ ಹರಿ ಹೋದುವು.

ಹೊಲಗೇರಿಯ ಕಾಶಿಯ ಗುಡಿಸಲ ಬಾಗಿಲು ತೆರೆದು ನಿಂತಿತ್ತು. ಹೊತ್ತಿಗೆ ಬೆದೆ ಹತ್ತಿದಂತೆ ಬಿಸಿಲು ಏರಿದರೂ ಕಾಶಿ ಹೊರಬರದಿದ್ದನ್ನು ಕಂಡು ದುರ್ಗವ್ವನ ಗುಡಿಯ ಪೂಜಾರಿ ಲಕ್ಕ್ಯಾ ಅವಳ ಗುಡಿಸಲೊಳಗೆ ಹೋದವನು ಗಕ್ಕನೆ ನಿಂತುಬಿಟ್ಟ.

ಅಂಗಾತ ಮಲಗಿದ್ದ ಕಾಶಿಯ ಕಣ್ಣು ಗುಡ್ಡೆಗಳು ಮೇಲಕ್ಕೆ ಏರಿದ್ದವು. ಅವಳ ಕುಪ್ಪಸ ಹರಿದಿತ್ತು. ಸೀರೆ ಬಿಚ್ಚಿತ್ತು. ಹೊಟ್ಟೆಯಿಂದ ಹೊರಬಂದ ಕರುಳುಗಳು ಮುದ್ದೆಯಾಗಿ ಬಿದ್ದಿದ್ದುವು. ತೊಡೆ ಸಂದಿಯಿಂದ ರಕ್ತ ಎರಡೂ ಕಾಲುಗಳ ನಡುವೆ ಹರಿದು ನಿಂತು, ಹೆಪ್ಪುಗಟ್ಟಿತ್ತು ಅವಳ ಮೇಲೆ ಮೊದಲು ಅತ್ಯಾಚಾರ ನಡೆಸಿ, ನಂತರ ಹೊಟ್ಟೆಗೆ ಚೂರಿಹಾಕಿ ಕರುಳುಗಳನ್ನು ಹಿರಿದು ಕೊಂದದ್ದು ನೋಡುವರಿಗೆಲ್ಲ ತಟ್ಟನೆ ತಿಳಿಯುತ್ತಿತ್ತು.

ಲಕ್ಕಾ ಲಬೊ ಲಬೋ ಅಂತ ಬೊಬ್ಬೆ ಹಾಕುತ್ತ ಚೀರುತ್ತಾ ಹೊರಗೋಡಿ ಬಂದನು. ಹಾಂ ಹಾಂ ಅನ್ನುವುದರಲ್ಲಿ ಮಂದಿ ಜಮಾಯಿಸಿದರು. ಹಳ್ಳಿಯ ದೋ ಪಾರ್ಟಿಯ ಮಂದಿ ಬಂದು ನಿಂತರು. ಒಂದು ಪಾರ್ಟಿಯ ಮಾಲಿ ಪಾಟೀಲ ಮೊದಲಾದವರೆಲ್ಲ ಜೋಲುಮಾರಿ ಹಾಕಿಕೊಂಡು ಕಣ್ಣೀರು ಮಿಡಿದರೆ ಇನ್ನೊಂದು ಪಾರ್ಟಿಯ ಪೋಲಿಸ ಗೋಡ ಮತ್ತಿತರರು ಮೂಗಿನಲ್ಲಿಯೇ ನಕ್ಕು ಮೀಸೆ ಸವರಿಕೊಂಡರು. ತಮ್ಮ ತಮ್ಮ ಪಾರ್ಟಿಗಳ ಜೋರಿನ ಮೇಲೆ ಚುನಾವಣೆಯ ಕಣಕ್ಕಿಳಿದಿದ್ದ ಹೊಲಗೇರಿಯ ಹೆಣ್ಣು ಕಾಶಿ, ಹೆಣವಾಗಿ ರಕ್ತದ ಮಡುವಿನಲ್ಲಿ ಬಿದ್ದಿದ್ದರೆ ಅದೇ ಕೇರಿಯ ಗಂಡು ಗೆಂಡೆಪ್ಪ ಅವಳ ಹೊಟ್ಟೆಗೆ ಚೂರಿ ಹಾಕಿ ಖೂನ್ ಮಾಡಿ ಪರಾರಿಯಾಗಿದ್ದ.

"ಎಂದಿಗಾದ್ರೂ ನಮ್ಮಂದೀದು ಇದೇ ಗತಿ ಆಗ್ತದೋ ಯಣ್ಣಾ.... ಕೋಳಿಗೋಳಿಗಿ ಸಿಂದಿ ಕುಡ್ಸಿ ಕಚ್ಚಾಡ್ಲಕ್ಕ ಬಿಟ್ಟ್ಹಂಗ ಉಳ್ಳ್ಯಾಗಿನ ದೋಪಾರ್ಟಿ ಮಂದಿ, ಈ ನಮ್ಮಂದೀಗಿ ಎಲೆಕ್ಷನ್ನಿಗಿ ಬಿಡ್ತಾರ, ಆಯ್ತು, ಕಚ್ಚ್ಯಾಡಿ ಸಾಯದು ಇವೇ, ಸಾಯೋ ಆಟದ ಮಜಾ ತಗೊಂಡು ಮೋಜ ಮಾಡಾದು ಮಾತ್ರ ಮ್ಯಾಲಿನ ಅದೋ ಪಾರ್ಟಿ ಮಂದಿನೇ ..... ಈ ನಮ್ ಹೊಂಬ ಮಂದಿಗೆಂದ ಬುದ್ಧಿ ಬರ್ತಾದೋ ಏನೋ..." ಮಾದರ ಮರೆವ್ವಾಯಿ ತನ್ನಷ್ಟಕ್ಕೇ ತಾನೇ ಸಣ್ಣ ದನಿಯಲ್ಲಿ ಒಟ ಒಟ ಗುಟ್ಟುತ್ತ ಅಳುತ್ತದ್ದದ್ದು ಆ ಗದ್ದಲದಲ್ಲಿ ಮಂದಿಗೆ ಕೇಳಿಸಲಿಲ್ಲ. ಹತ್ತಿರದಲ್ಲಿಯೇ ನಿಂತಿದ್ದ ಅವಳ ಮಗ ಕೇಳಿಸಿಕಂಡು ಅವಳ ರಟ್ಟೆ ಹಿಡಿದೆಳೆದುಕೊಂಡು.

"ಸುಮ್ಮನ ಮನ್ಯಾಗ ಬೀಳಾದು ಬಿಟ್ಟು ಇಲ್ಲ್ಯಾಕೆ ಬಂದೀದೇ ನಿನ್ನವ್ವನಾ.... ಮೊದಲೆ ನಿನಗ ಅರುಮರು ಹಿಡದದ, ಏನೆರೆ ಒದರ‍್ಯಡಿ ನಮ್ ಕುತಗಿಗಿ ತಂದಿಟ್ಟಿಯೇ ಮುದಕೀ..... ನಡಿ ಒಳಗ.... ಎನ್ನುತ್ತ ಜಬರದಸ್ತಿಯಿಂದ ಅವಳನ್ನೆಳೆದುಕೊಂಡೊಯ್ದ.

ಪೋಲೀಸ ಜೀಪುಗಳು ಬರುವ ಸಪ್ಪಳ ಹತ್ತಿರವಾದಂತೆಲ್ಲ ಮಂದಿ ಮೆಲ್ಲಗೆ ಅಲ್ಲಿಂದ ದೂರ ಸರಿಯ ತೊಡಗಿದರು.

– "ಕ್ಯಾದಿಗಿ ಬನದಾಗ ಕತೆಯಾಗಿ ನಿಂತವರು"
ಸಂಕಲನದಿಂದ ಆಯ್ದುದ್ದು

ಬೆಳ್ಳಿ ಹಬ್ಬದ ಸಂಭ್ರಮದಲ್ಲಿ ಜನವಾದಿ

ಪಶ್ಚಿಮ ರಾಷ್ಟ್ರಗಳಿಂದ ಪ್ರಭಾವಿತವಾದ "ಮಹಿಳಾ ಸಮಸ್ಯೆಗಳೆಂದರೆ ಪುರುಷ ನಿರ್ಮಿತ" ವೆಂಬ ಅಭಿಪ್ರಾಯ ವಿದ್ದ 70ರ ದಶಕದ ಸಂದರ್ಭ, ಅದಕ್ಕೆ ವ್ಯತಿರಿಕ್ತವಾಗಿ ಭಾರತದ ಮಹಿಳಾ ಚಳುವಳಿಯ ಮುಂಚೂಣಿಯಲ್ಲಿದ್ದು ಎಡ ಚಿಂತನೆಯ ನೆಲೆಯಲ್ಲಿ ವಿಶಾಲ ತಳ ಹದಿಯ ಮಹಿಳಾ ಸಂಘಟನೆಯನ್ನು ಕಟ್ಟಿ ಬೆಳೆಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತ, ಬಹಳ ಸ್ಪಷ್ಟವಾಗಿ ಮಹಿಳಾ ಶೋಷಣೆಗೂ ಮತ್ತು ಸಾಮಾಜಿಕ, ಆರ್ಥಿಕ ರಚನೆಗಳಿಗೂ ನೇರ ಸಂಬಂಧವಿದೆ ಎಂಬುದನ್ನು ಪ್ರತಿಪಾದಿಸುತ್ತ ಹುಟ್ಟಿ ಬಂದ ಜನವಾದಿಗೀಗ 25 ತುಂಬಿದೆ.

ಸಾಮ್ರಾಜ್ಯಶಾಹಿ ವಿರುದ್ಧದ ಹೋರಾಟದ ಸ್ವಾತಂತ್ರ ಸಂಗ್ರಾಮದ ಸಂದರ್ಭದಲ್ಲಿಯೆ ತನ್ನ ಚಟುವಟಿಕೆಗಳನ್ನು ಪ್ರಾರಂಭಿಸಿದ್ದ ಹಲವಾರು ರಾಜ್ಯ ಮಟ್ಟದ ಸಂಘಟನೆಗಳು ಸೇರಿ ಒಂದು ವಿಶಾಲ ವೇದಿಕೆಯಾಗಿ ಜನವಾದಿಯಾಗಿ ನಾಮಾಂಕಿತಗೊಂಡಿದ್ದು 1981ರ ಮಾರ್ಚ್ 12 ರಂದು.

ತನ್ನ ಬೆಳ್ಳಿ ಹಬ್ಬವನ್ನಾಚರಿಸುವ ಸಂದರ್ಭದಲ್ಲಿ ಜನವಾದಿ ನಡೆಸಿದ ಹಲವಾರು ಚಟುವಟಿಕೆಗಳು ದಾಖಲೆಗೆ ಅರ್ಹ ವಾದುವುಗಳೇ. ದೇಶದಾದ್ಯಂತ ಕಳೆದ 25 ವರ್ಷಗಳಲ್ಲಿ ನಡೆಸಿದ ಧೀರೋದಾತ್ತ ಹೋರಾಟಗಳು, ಸಾಧನೆಗಳು, ವೇದನೆಗಳು ಗಳಿಸಿದ ಅನುಭವಗಳು ಇವೆಲ್ಲವೂ ಒಟ್ಟು ಮಹಿಳಾ ಚಳುವಳಿಗೆ ಮಾದರಿಗಳನ್ನು ನಿರ್ಮಿಸುವಲ್ಲಿ ಒಂದಿಷ್ಟು ಕೊಡುಗೆ ನೀಡಿದೆ.

ಮಹಿಳೆಯರ ಸರ್ವಾಂಗೀಣ ಅಭಿವೃದ್ಧಿಯ ಸಾಧನೆಗೆ ವಿವಿಧ ನೆಲೆಗಳಲ್ಲಿ ಕೆಲಸ ಮಾಡುತ್ತ ಬಂದ ಸಂಘಟನೆ ಎಲ್ಲ ಸ್ತರದ ಮಹಿಳೆಯರೊಂದಿಗೆ ಒಡನಾಟ ಸ್ನೇಹ, ಸಂಬಂಧ ಬೆಸೆಯ ಬಯಸಿ ಸಾಂಸ್ಕೃತಿಕ ಲೋಕದತ್ತ ಒಂದು ಇಣುಕಿ ಹಾಕಿತು. ಈವರೆಗೆ ಮಹಿಳೆಯರ ಸಮಸ್ಯೆಗಳ ಕುರಿತು ಸ್ವತಃ ಬೀದಿನಾಟಕ, ಸಭೆ, ಭಾಷಣಗಳನ್ನಾಡಿದ ಜನವಾದಿ ಬೆಳ್ಳಿ ಹಬ್ಬದ ಸಮಾರೋಪದಲ್ಲಿ ಪ್ರಯತ್ನಿಸಿದ್ದು ರಂಗಭೂಮಿ ಮತ್ತು ಚಿತ್ರ ಜಗತ್ತುಗಳ ಪ್ರವೇಶಕ್ಕೆ. ಸಂಘಟನೆಯ ಈ ಹೆಜ್ಜೆಗಳಿಗೆ ಬಲ ಕೊಟ್ಟಿದ್ದು ಕರ್ನಾಟಕ ನಾಟಕ ಅಕಾಡೆಮಿ ಮತ್ತು ರಾಜ್ಯ ಯುವ ಜನ ಸೇವೆ–ಮತ್ತು ಕ್ರೀಡಾ ಇಲಾಖೆ.

ಮಹಿಳಾ ರಂಗ ಕರ್ಮಿಗಳಿಗೆ ಒಂದು ವಿಶೇಷ ಅವಕಾಶ ಸೃಷ್ಟಿಸುವ ನಿಟ್ಟಿನಲ್ಲಿ ನಾಟಕ ಅಕಾಡೆಮಿ ಒಂದು ವಿಶೇಷ ಪ್ರಯತ್ನವನ್ನು ಈ ಹಿಂದೆಯೇ ನಡೆಸಿತ್ತು. ಅದೆಂದರೆ ಕುಮಾರವ್ಯಾಸ ಭಾರತದ ಪಾತ್ರಗಳನ್ನಾಧರಿಸಿ ನಾಟಕ ರಚಿಸುವ ಮತ್ತು ಅದನ್ನು ಮಹಿಳೆಯರೇ ರಂಗ ಪ್ರಸ್ತುತ ಮಾಡಬೇಕೆನ್ನುವ ಪ್ರಯತ್ನ. ಈ ಪ್ರಯೋಗ ರಂಗಾರ್ಪಣೆ ಯಾಗಿದ್ದು ವಿಶ್ವರಂಗ ಭೂಮಿ ದಿನಾಚರಣೆಯಂದು, ಆಗಲೇ ಜನವಾದಿಯ ಬೆಳ್ಳಿ ಹಬ್ಬದ ಸಮಾರೋಪ ಕೂಡ ಸಜ್ಜಾಗಿದ್ದು ಒಂದು ವಿಶೇಷ.

ಸಾಮಾನ್ಯವಾಗಿ ಮಹಾಭಾರತ, ರಾಮಾಯಣಗಳ ಚಿತ್ರಣಗಳೆಂದರೆ ಅದೇ ಸವಕಲು ನೀತಿಗಳು. ಪತಿ ಭಕ್ತಿ ಪರಾಯಣೆಯರು, ವಿಧಿಯನ್ನು ಹಳಿದುಕೊಂಡು ಇಹಕ್ಕಿಂತ ಪರದತ್ತಲೇ ದೃಷ್ಟಿ ನೆಟ್ಟವರು. ಗಂಡನ ಹಿತದಿಂದಾಚೆ ತನ್ನದೆನ್ನುವುದೇನೂ ಇಲ್ಲವೆಂದುಕೊಂಡು ಬದುಕಿರುವುದೇ ಆದರ್ಶ ಸ್ತ್ರೀ ಗುಣಗಳೆಂದು ವರ್ಣಿಸುವ ಚಿತ್ರಣಗಳು. ಆದರೆ ಇಲ್ಲಿ ಅದಕ್ಕೆ ಬದಲಾಗಿ ಐವರು ಗಂಡಂದಿರಿಗೆ ಹೆಂಡತಿಯಾದ ದ್ರೌಪದಿಯ ಆತ್ಮಾಭಿಮಾನದ ಮಾತುಗಳು, ಲೋಕರೂಢಿಯನ್ನು ಪ್ರಶ್ನಿಸುವ ಪುರುಷ ಸಿಂಹಗಳೆಂದು ಕರೆಸಿಕೊಂಡೂ ಕುರಿಗಳಂತೆ ಬದುಕುವ ಐವರು ಗಂಡಸರ ಪೌರುಷಕ್ಕೆ ಸವಾಲೆಸೆಯುವ ಮೂಲಕ ಭಾರತದ ಕಥೆಗೆ ಹೊಸ ಚಿಂತನೆ ನೀಡಿದ ಎಸ್.ಮಂಗಳಾರ "ಧರೆಯೊಳಗಿನ ರಾಜಕಾರಣ" ಒಂದು ವಿಶಿಷ್ಟ ಅನುಭವವನ್ನೇ ನೀಡಿತು. ಲೋಕಕ್ಕೆ ಪಾಂಡವರ 'ತಾಯಿ'ಯಾಗಿ ಪರಿಚಿತಳಾದ ಕುಂತಿ ಇಲ್ಲಿ ದ್ರೌಪದಿಯ ನೋವಿಗೆ ಮತ್ತೊಬ್ಬ ಹೆಣ್ಣಾಗಿ ಧ್ವನಿಸುವ ಕ್ಷಣಗಳೂ ನುಸುಳುತ್ತವೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹಲವಾರು ಬಾರಿ ಅದರಿಂದಲೇ ಪ್ರಭಾವಿತರಾಗಿ, ಅವರಂತೆಯೇ ಮಹಿಳೆಯರೂ ಯೋಚಿಸುವ ಸಂದರ್ಭಗಳ ಬಗ್ಗೆ ಕುಂತಿ ಮಾತನಾಡುತ್ತಾಳೆ. ಸ್ಥಾಪಿತ ಮೌಲ್ಯಗಳನ್ನು ಗಟ್ಟಿಗೊಳಿಸುವ ನಿಟ್ಟಿನಲ್ಲಿ ವಿದ್ಯುನ್ಮಾನ ಮಾಧ್ಯಮಗಳು ತಲ್ಲೀನವಾಗಿರುವಾಗ, ಅದೇ ಕಥೆಯನ್ನು ಬಳಸಿಯೇ ಮಹಿಳಾ ಪರ ನಿಲುವುಗಳನ್ನು ಸಾಕ್ಷೀಕರಿಸಬಹುದೆನ್ನುವ ಮಂಗಳಾರ ಪ್ರಯತ್ನ ಮತ್ತು ತಾನು 'ಗುರು' ವಲ್ಲದಿದ್ದರೂ, ಶಿಷ್ಯನಿಂದ ಗುರು ಕಾಣಿಕೆ ಕೇಳಿದ ದ್ರೋಣ. ಹೇಗೆ ಈ "ಶಿಷ್ಟ" ಸಮಾಜ ಉಳ್ಳವರ ಪರವಾಗಿಯೇ ನಿಲ್ಲುತ್ತದೆ ಎಂಬುದು ದ್ರೋಣ ತನ್ನ ಶಿಷ್ಯನಾದ ರಾಜಕುಮಾರ ಅರ್ಜುನನಿಗಾಗಿ ಕೆಳವರ್ಗದ, ಶ್ರಮಜೀವಿ, ಬೇಡರ ಕುಲದ ಏಕಲವ್ಯನ ತೋರು ಬೆರಳುಗಳನ್ನೇ ಗುರುಕಾಣಿಕೆ ಕೇಳುತ್ತಾನೆ. ಇದುವರೆಗೆ ನಾವು ಕೇಳಿದ್ದು ತನ್ನ ಕಲ್ಪನೆಯು ಗುರುದರ್ಶನವಾಯಿತೆಂದು ಆನಂದ ತುಂದಿಲನಾದ ಏಕಲವ್ಯ ಭಕ್ತಿ ಪರವಶವಾಗಿ ಗುರುಕಾಣಿಕೆ ನೀಡುತ್ತಾನೆ ಅಷ್ಟೆ. ಆದರೆ ಜಯಶ್ರೀ ಕಂಬಾರರ ಕಥೆ–ಏಕಲವ್ಯನ ತಾಯಿ ಕಾಡಿನ ಹೆಣ್ಣು ನಾಡಿನ "ಶಿಕ್ಷಿತ" ವರ್ಗದ ದ್ರೋಣನನ್ನು ಬಂದು ಪ್ರಶ್ನಿಸುವ ದಿಟ್ಟತನವನ್ನು ನಮ್ಮ ಮುಂದಿಡುತ್ತದೆ. ಬದುಕೇ ಬೇಟೆಯಾಗಿರುವ ತಮ್ಮ ಕುಲದ ಬದುಕನ್ನೇ ಬೇಟೆಯಾಡಿದ ಶಿಷ್ಯ ಸಮಾಜದ ಕೃತ್ಯಕ್ಕೆ ಧಿಕ್ಕಾರ ಹೇಳಿಸುತ್ತದೆ. ಇದರ ರಂಗ ಪ್ರಸ್ತುತಿ ಪ್ರತಿಭಾ ರಾಘವೇಂದ್ರ ನಾಟಕ ಋಣ. ಉಷಾ ಕಟ್ಟೆ ಮನೆಯವರ ರಂಗರೂಪ 'ಚಕ್ರವ್ಯೂಹ'ದ ರಂಗ ಪ್ರಸ್ತುತಿ ದಾಕ್ಷಾಯಿಣಿ ಭಟ್. ಕ್ಯಾರವರ ಕುತಂತ್ರ, ಕೃಷ್ಣನ ತಂತ್ರಕ್ಕೆ ಬಲಿಯಾದ ಅಭಿಮನ್ಯು. ಅವನ ಸಾವಿನ ಸಂದರ್ಭದಲ್ಲಿ ಕೇವಲ ಅವನ ಸಾವಿಗೆ ದುಃಖಿಸದೇ ಯುದ್ಧದಲ್ಲಿ ಮಡಿದ ಎಲ್ಲರ ಸೋದರಿಯಾಗಿ, ತಾಯಿಯಾಗಿ

ದುಃಖಿಸುತ್ತೇನೆ ಎನ್ನುವ ಯುದ್ಧದ ನೋವಿನ ಕುರಿತ ಮಾತುಗಳು ಈ ಎಲ್ಲವೂ ಜನವಾದಿಯ ಕನಸುಗಳಿಗೆ ಈ ಗೆಳತಿಯರು ಬರೆದ ಚಿತ್ರಗಳು.

ನಾಟಕೋತ್ಸವದ ಉದ್ಘಾಟನಾ ಸಮಾರಂಭದ ಸಂದರ್ಭದಲ್ಲಿ ಜನಪರ ಕಾಳಜಿಗಳು ಜನವಾದಿಯಂತಹ ಸಂಘಟನೆಗಳಿಗೆ ಮಾತ್ರ ಸೀಮಿತವಾಗದೇ ಎಲ್ಲ ಜನ ಸಮುದಾಯಗಳಿಗೂ ವಿಸ್ತರಿಸಬೇಕು. ಯಾವುದೇ ಕಲೆ ಕ್ರಿಯಾಶೀಲವಾದರೆ ಅದು ಜನಪರವಾಗುತ್ತದೆ ಎಂದ ಕನ್ನಡ– ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಐ.ಎಂ.ವಿಠ್ಠಲ ಮೂರ್ತಿಯವರ ಮಾತುಗಳು, ಸ್ತ್ರೀ ವಾದ ಅನೇಕ ಕವಲು ಗಳನ್ನು ಕಂಡಿದೆ, ಮಹಿಳೆಯರಿಗೆ ಎಲ್ಲ ಅರ್ಹತೆ ಗಳಿದ್ದರೂ ನ್ಯಾಯಯುತವಾಗಿ ಸಿಗಬೇಕಾದ ಅವಕಾಶಗಳು ಸಿಗುತ್ತಿಲ್ಲ ಎಂಬುದನ್ನು ಹೇಳುತ್ತ, ಮ್ಯಾಕ್ಸಿಂಗಾರ್ಕಿಯಂತಹ ಮಹಾನ್ ನಾಟಕಕಾರರು ರಚಿಸಿದ ಮೇರು ಕೃತಿ "ತಾಯಿ"ಯಂತಹ ನಾಟಕಗಳ ಮೂಲಕ ವಿಶ್ವ ರಂಗ ಭೂಮಿಯ ಕುರಿತು ಮಾತನಾಡಿದ ಸುರೇಶ್ ಆನಗಳ್ಳಿ, –ಮಹಿಳೆಯರು ಸ್ವಭಾವತಃ ಮಹಾನ್ ಕಲಾವಿದೆಯರು ಅವರ ಕೈಗೆ ತುಂಡು ಅರಿವೆ ಸಿಕ್ಕರೆ ಸುಂದರ ಉಡುಪು ತಯಾರಿಸುತ್ತಾರೆ, ದಾರ ಸಿಕ್ಕರೆ ಕುಶಲ ಕಸೂತಿ ನೇಯುತ್ತಾರೆ, ಇಡಿ ಸಮಾಜವನ್ನೇ ಪುನರ್ ಸೃಷ್ಠಿ ಮಾಡುವ ಮಹಾನ್ ಸಂಘಟಕರೆ ಮಹಿಳೆ ಎಂದ ಕಾಳಿಂದಿ ದೇಶಪಾಂಡೆಯವರು ಈ ಎಲ್ಲರ ಮಾತುಗಳು ಈ ನಾಟಕಗಳಿಗೆ ಮುನ್ನುಡಿ ಬರೆಧಂತಿದ್ದವು.

ಬೆಳ್ಳಿ ಹಬ್ಬವನ್ನಾಚರಿಸುವ ಮಾತು ಬಂದಾಗ ಜನವಾದಿ ಯೋಚಿಸಿದ್ದು... ಸದಾ ಹೋರಾಟದ ನೆಲೆಯಲ್ಲಿ ಸಾಗುವ ಜನವಾದಿ ಸಾಂಸ್ಕೃತಿಕವಾಗಿ ಕೂಡ ಹೊಸ ಹೆಜ್ಜೆಗಳನ್ನು ಹಾಕಬೇಕೆಂದು. ಜುಲೈ 2006ರಲ್ಲಿ ನಡೆದ ರಾಜ್ಯ ಮಟ್ಟದ 5 ದಿನಗಳ ಕಲಾಶಿಬಿರ, ನವೆಂಬರ್ 2006 ರ ರಾಜ್ಯ ವ್ಯಾಪೀ ಕಲಾಜಾತಾ ಈ ಎರಡು ಪ್ರಯತ್ನಗಳಿಗೆ ಸಿಕ್ಕ ಪ್ರೋತ್ಸಾಹ ಕೊಟ್ಟ ಸ್ಪೂರ್ತಿ ಈ 3 ದಿನಗಳ ನಾಟಕೋತ್ಸವ ಮತ್ತದರ ಜೊತೆಯಲ್ಲಿಯೇ ನಡೆದ 3 ದಿನಗಳ ಚಲನ ಚಿತ್ರೋತ್ಸವ ಈ ಸಂದರ್ಭದಲ್ಲಿಯೇ ನಡೆಸಿದ ಮತ್ತೊಂದು ಸಾಹಸ ರಾಜ್ಯ ಮಟ್ಟದ ಛಾಯಾಚಿತ್ರ ಸ್ಪರ್ಧೆ ಮತ್ತು ಪ್ರದರ್ಶನ. ಮಹಿಳೆ ಮತ್ತು ಹಿಂಸೆ, ಮಹಿಳೆ ಮತ್ತು ಹಸಿವು ಎಂಬ ಶಿರ್ಷಿಕೆಯಡಿ ನಡೆಸಿದ ಈ ಪ್ರಯತ್ನಕ್ಕೆ ಸಿಕ್ಕ ಪ್ರತಿಕ್ರಿಯೆ ಉತ್ತಮವಾಗಿತ್ತು. ಪ್ರತಿನಿತ್ಯ ಜನವಾದಿಯ ಸಹಾಯವನ್ನರಸಿ ಬರುವ ದೌರ್ಜನ್ಯದ ಪ್ರಕರಣಗಳು, ಅಲ್ಲ ಕಣ್ಣಿಗೆ ಕಾಣುವ, ಕಾಣದ ಆದರೆ ಅನುಭವಕ್ಕಷ್ಟೇ ದಕ್ಕುವ ಹಿಂಸೆಗಳು, ಮಹಿಳೆ ಒಟ್ಟು ಸಮಾಜದ ಅವಶ್ಯಕತೆಗೆ ಕೊಡುಗೆ ನೀಡುವ ಹೆಣ್ಣಾಗಿ. ಹೀಗೆ ಹೆಣ್ಣಿನ ವಿವಿಧ ಮುಖಗಳನ್ನು ಸೆರೆಹಿಡಿಯುವ ಆಲೋಚನೆಗೆ ರೂಪ ಕೊಟ್ಟಿದ್ದು ನೂರಾರು ಕ್ಯಾಮರಾಗಳು. ಈ ಕ್ರೂರ ವ್ಯವಸ್ಥೆ ಹೆಣ್ಣಿಗೆ ಕಟ್ಟುವ ವಿಧವೆಯ ಪಟ್ಟ, ಬಿಳಿ ಸೀರೆಯ ಸೆರಗು ತಲೆಯ ಮೇಲೆ ಹೊದ್ದು, ಅವನತ ಮುಖಿಯಾಗಿ ಕುಳಿತ ಹೆಣ್ಣು, ಅವಳೆದುರು – ಬಾಡಿ ಬಸವಳಿದು ನೇತು ಬಿದ್ದ ಮಲ್ಲಿಗೆಯ ಮಾಲೆ, ರಾಶಿ ಕಸ ತುಂಬಿರುವ ತಿಪ್ಪೆಯ ಮೇಲೆ ತನ್ನ ಹಸುಗೂಸನ್ನು ತೊಡೆಯ ಮೇಲೊರಿಸಿ ಕುಳಿತುಕೊಂಡು ಏನಾದರೂ ಸಿಕ್ಕೀತೇ ಎಂದು ಹುಡುಕಾಟ ನಡೆಸಿ ಬದುಕ ಬಯಸುವ ಮಹಿಳೆ.. ಹೀಗೆ ಮಹಿಳೆಯ ಬದುಕಿನ ವಿವಿಧ ಮುಖಗಳನ್ನು ತೆರೆದಿಟ್ಟ ಛಾಯಾ ಚಿತ್ರಗಳು ರಾಶಿ ರಾಶಿ ಬಂದು ಸೇರಿದವು. ಅಷ್ಟೇ ಅಲ್ಲ ಬಂದವುಗಳನ್ನು ಆಯ್ದು ಬಹುಮಾನ ನಿಡಲು ಕರೆದಾಗ ಆ ಎಲ್ಲ ಛಾಯಾ ಚಿತ್ರಗ್ರಾಹಕರೂ ದೂರದ ಊರುಗಳಿಂದ ಬಂದಿದ್ದಂತೂ ಅತ್ಯಂತ ಆತ್ಮಿಯ ಗಳಿಗೆ.

ಸಮಾಜದ ಮೇಲ್ವರ್ಗದ ಮಹಿಳೆಯರು..... ಎನಿಸಿ ಕೊಂಡವರು ನೆಲದ ಮಾತುಗಳಿಗೆ ಕಿವುಡರು ಎನ್ನುವ ಅಭಿಪ್ರಾಯ ಎಲ್ಲರ ಸಂದರ್ಭದಲ್ಲಿಯೂ ಸತ್ಯವಲ್ಲ ವೆಂಬುದನ್ನು ಸಾಕ್ಷೀಕರಿಸುವ ಮತ್ತು ಎಡ ಚಿಂತನೆಯ ಕುಲುಮೆಯಲ್ಲಿ ಗಟ್ಟಿಯಾದ ಜೀವಗಳು ಹುಟ್ಟಿದ್ದು ಯಾವ ಕುಟುಂಬದಲ್ಲಿಯಾದರೂ ಅವರ ಐಡೆಂಟಿಟಿ ಉಳಿದು ಕೊಳ್ಳುವುದು ದುಡಿಯುವ ವರ್ಗದ ಜೊತೆಯಲ್ಲಿ ಎಂಬುದನ್ನು ಪೃಷ್ಟೀಕರಿಸುವ, ಸ್ವಾತಂತ್ರ ಸಂಗ್ರಾಮದ ಕುರಿತು ಬಂದ ಸಾವಿರಾರು ಪುಟಗಳ ಚರಿತ್ರೆಗಳಲ್ಲಿ ಹೆಸರೂ ಕೇಳಿಸದ, ಆದರೆ ಸ್ವಾತಂತ್ರ ಸಂಗ್ರಾಮಕ್ಕೆ, ದೇಶದ ಮಹಿಳಾ ಚಳುವಳಿಗೆ ಹೊಸ ಭಾಷ್ಯ ಬರೆದ ಅಡ್ಡಗೋಡೆಗಳನ್ನೊಡೆದು ಮುನ್ನಡೆದ.... ಹನ್ನೆರಡು ಮಹಿಳೆಯರ ಕತೆಗಳು ಈ ಸಂದರ್ಭದಲ್ಲಿ ಬಿಡುಗಡೆಯಾಗಿದ್ದು ಅತ್ಯಂತ ಸಂಭ್ರಮದ ಸಂದರ್ಭ.

ಛಾಯಾಚಿತ್ರ, ಚಲನಚಿತ್ರ ಪ್ರದರ್ಶನಗಳನ್ನು ಉದ್ಘಾಟಿಸು ವಾಗ ಛಾಯಾಚಿತ್ರಗ್ರಾಹಕರಿಗೆ ಬಹುಮಾನ ನೀಡುವಾಗ, ಚಿತ್ರ ಪ್ರದರ್ಶನಕ್ಕೆ ಸಜ್ಜುಗೊಳಿಸಲು ದುಡಿದಾಗ.... ಮಾತನಾಡಿದ ಗಿರೀಶ್ ಕಾಸರವಳ್ಳಿ, ನಟಿ ತಾರಾ, ಚಿಂತಕಿ ಡಾ॥ವಿಜಯಾ, ಡಾ॥ ಎನ್ ಗಾಯತ್ರಿ, ಬಿ.ಸುರೇಶ್, ಪಿ.ಶೇಷಾದ್ರಿ, ಕೆ.ಎಸ್.ರಾಜಾರಾಂ, ಸಗ್ಗೆರೆ ರಾಮಸ್ವಾಮಿ, ಎಂ.ಎಸ್.ಹೆಬ್ಬಾರ್ ಇವರೆಲ್ಲರ ಆಶಯಗಳು ಜನವಾದಿಯ ಆಶಯಗಳೇ ಆಗಿದ್ದವು.

ಇದೇ ಸಂದರ್ಭದಲ್ಲಿ ಯುವ ಜನರ ಮೇಲೆ ಮಾಧ್ಯಮ ಗಳ ಪ್ರಭಾವ ಮತ್ತು ಮಹಿಳೆಯರ ಮೇಲೆ ಪರಿಣಾಮದ ಕುರಿತು ವಿಚಾರ ಸಂಕಿರಣ ನಡೆಯಿತು. ವಿಷಯ ಮಂಡಿತರ ಮತ್ತು ಪ್ರತಿಕ್ರಿಯೆ ನಿಡಿದವರ ಎಲ್ಲರ ಆತಂಕ ಮಾಧ್ಯಮಗಳು, ಜಾಹಿರಾತುಗಳು ಸೃಷ್ಟ ಮಾಡುತ್ತಿರುವ ಭೀಕರತೆ. ಕೇವಲ ಮಹಿಳೆಯರಲ್ಲದೇ ಇಡೀ ಸಮಾಜವೇ ಅದಕ್ಕೆ ಬಲಿಯಾಗುತ್ತಿರುವುದು.

ಒಟ್ಟಿನಲ್ಲಿ 25 ವರ್ಷಗಳ ಸಾಧನೆಗಳನ್ನು ದಾಖಲಿಸುತ್ತ, ಕ್ರಮಿಸಬೇಕಾದ ದೀರ್ಘಮಾರ್ಗವನ್ನು ಸೃಷ್ಟಿಗೊಳಿಸಿಕೊಳ್ಳುತ್ತ ಮುನ್ನಡೆಯ ಬಯಸುವ ಜನವಾದಿಗೆ ಇವೆಲ್ಲವೂ, ಈ ಎಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಪ್ರೇರೇಪಕರು, ಹಿತ ಚಿಂತಕರು, ಹೆಜ್ಜೆಗೆ ಹೆಜ್ಜೆ ಜೋಡಿಸುವ, ಗೆಜ್ಜೆಗೆ ನಾದ ನೀಡುವ ಸಂಗಾತಿಗಳು

– ಕೆ.ಎಸ್.ವಿಮಲ

ಮೈತ್ರಿ ಸರ್ಕಾರದ ಸಾಧನೆಗಳು

ರಾಜ್ಯದ ಸರ್ವತೋಮುಖ ಪ್ರಗತಿಗೆ ಪಣತೊಟ್ಟು ಫೆಬ್ರವರಿ 3, 2006 ರಂದು ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರ ನೇತೃತ್ವದಲ್ಲಿ ಆಡಳಿತದ ಚುಕ್ಕಾಣಿ ಹಿಡಿದ ಮೈತ್ರಿಕೂಟ ಸರ್ಕಾರದ ಗ್ರಾಮೀಣ ಮತ್ತು ನಗರ ಪ್ರದೇಶಗಳ ಅಭಿವೃದ್ಧಿಗೆ ಸಮಾನ ಆದ್ಯತೆ ನೀಡಿದೆ. ಕಳೆದ ಒಂದು ವರ್ಷದ ಅವಧಿಯಲ್ಲಿ ಈ ದಿಕ್ಕಿನಲ್ಲಿ ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ಹಗಲು-ಇರುಳು ಎನ್ನದೆ, ಹಳ್ಳಿ-ಹಳ್ಳಿಗೆ ಭೇಟಿ ನೀಡಿ ಅಲ್ಲಿಯೇ ವಾಸ್ತವ್ಯ ಹೂಡಿ, ಹಳ್ಳಿಗರ ಮನದಾಳಕ್ಕೆ ಇಳಿದು ಅವರ ಕುಂದು-ಕೊರತೆಗಳಿಗೆ ಸ್ಪಂದಿಸುತ್ತಿರುವುದು ಜನತೆಯಲ್ಲಿ ಹೊಸ ಭರವಸೆ ಮೂಡಿಸಿದೆ. ಮೈತ್ರಿಕೂಟ ಸರ್ಕಾರದ ಪರಿಶ್ರಮದ ಫಲವಾಗಿ ಕರ್ನಾಟಕ ಇಂದು ದೇಶದ ಹಲವಾರು ರಂಗಗಳಲ್ಲಿ ಪ್ರಥಮ ಸ್ಥಾನದಲ್ಲಿದೆ.

ಬೆಂಗಳೂರು ಸಮಗ್ರ ಅಭಿವೃದ್ಧಿಗೆ ನೀಲನಕ್ಷೆ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ - ಮೈಸೂರು ರಸ್ತೆ ಹಾಗೂ ಮಾಗಡಿ ರಸ್ತೆ ನಡುವೆ 92 ಕೋಟಿ ರೂ. ವೆಚ್ಚದಲ್ಲಿ ಹೊರವರ್ತುಲ ರಸ್ತೆ ಕೆಲಸ.

* 2007 ರ ಜೂನ್ ವೇಳೆಗೆ ಮಾಗಡಿ ರಸ್ತೆ-ಕಾರ್ಡ್ ರಸ್ತೆ ನಡುವೆ ಅಂಡರ್‌ಪಾಸ್.
* ಆರ್ಥಿಕ ದುರ್ಬಲ ವರ್ಗಗಳಿಗಾಗಿ ತಲಾ 3 ಲಕ್ಷ ಮೊತ್ತದ 2 ಲಕ್ಷ ಮನೆ ವಿತರಿಸುವ ಮಿತ ಬಜೆಟ್ ವಸತಿ ಕಾರ್ಯಕ್ರಮ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ: 20 ತಿಂಗಳಲ್ಲಿ ಪೂರ್ಣಗೊಳಿಸಲು ಉದ್ದೇಶಿಸಿರುವ 1800 ಕೋಟಿ ರೂ. ವೆಚ್ಚದ 30 ಕಿ.ಮೀ. ಒಳವರ್ತುಲ ರಸ್ತೆ ಮತ್ತು 33 ಅಂಡರ್‌ಪಾಸ್‌ಗಳು.

* 131 ಕೋಟಿ ರೂ. ವೆಚ್ಚದಲ್ಲಿ 6 ಅಂಡರ್‌ಪಾಸ್ ನಿರ್ಮಿಸಲು ಉದ್ದೇಶ.
* 155 ಕಿ.ಮೀ. ಉದ್ದದ 70 ಒಳರಸ್ತೆಗಳ ಅಭಿವೃದ್ಧಿ.

ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ: ಕಾವೇರಿ ನಾಲ್ಕನೇ ಹಂತದ 2ನೇ ಘಟ್ಟದ ಯೋಜನೆ ಒಂದು ವರ್ಷ ಮೊದಲೇ ಪೂರ್ಣಗೊಳಿಸುವ ಗುರಿ.

* ಹೆಚ್ಚುವರಿಯಾಗಿ 500 ಎಂಎಲ್‌ಡಿ ನೀರು ಬೆಂಗಳೂರಿಗೆ.
* ಸಮರೋಪಾದಿಯಲ್ಲಿ ಮ್ಯಾನ್‌ಹೋಲ್‌ಗಳ ಸ್ವಚ್ಛತಾ ಕಾರ್ಯಕ್ರಮ.

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ: ಬೆಂಗಳೂರು ಮಹಾನಗರದಲ್ಲಿ ಬಸ್‌ಗಳು ಸಂಚರಿಸುತ್ತಿರುವ ನಿಖರ ಮಾಹಿತಿ ಒದಗಿಸುವ ಗ್ರಿಡ್ ವ್ಯವಸ್ಥೆ ಪರಿಣಾಮಕಾರಿ ಅಳವಡಿಕೆ.

* ಒಂದು ಸಾವಿರ ಓಲ್ವೋ ಬಸ್‌ಗಳು, 737 ಯುರೋ-3 ಬಸ್‌ಗಳು.

ಬೆಂಗಳೂರು ಮೆಟ್ರೋ ರೈಲು ನಿಗಮ: ಕಂಠೀರವ ಕ್ರೀಡಾಂಗಣ ಹಾಗೂ ಬೈಯಪ್ಪನಹಳ್ಳಿಯವರೆಗೆ 7ಕಿ.ಮೀ. ಉದ್ದದ 138 ಕೋಟಿ ರೂ. ವೆಚ್ಚದ ನಮ್ಮ ಮೆಟ್ರೊ ಕಾಮಗಾರಿಗೆ ಚಾಲನೆ.

ಬೆಂಗಳೂರು ಮಹಾನಗರಾಭಿವೃದ್ಧಿ ಪ್ರಾಧಿಕಾರ: ಸಕಲ-ಸವಲತ್ತು ಒಳಗೊಂಡ ದುಡಿಯುವ ವರ್ಗಕ್ಕೆ ಅನುಕೂಲಕರವಾದ, ಜೀವನ ನಿರ್ವಹಣೆಗೆ ಸಹಕಾರಿಯಾದ ಉಪನಗರಗಳ ನಿರ್ಮಾಣ.

* 180 ಕಿ.ಮೀ. ವೇಗದಲ್ಲಿ ಸಂಚರಿಸಲು ಅನುಕೂಲವಾದ ಬೆಂಗಳೂರು ಮಹಾನಗರ ರಿಂಗ್ ರಸ್ತೆ, 2ನೇ ಹಂತದಲ್ಲಿ ವಿಮಾನ ನಿಲ್ದಾಣ ಎಕ್ಸ್‌ಪ್ರೆಸ್ ಹೆದ್ದಾರಿಯಿಂದ ರಾಷ್ಟ್ರೀಯ ಹೆದ್ದಾರಿ 207 ಕ್ಕೆ ಸಂಪರ್ಕಿಸುವ ರಸ್ತೆ ಕಾಮಗಾರಿ.

ಹೊಮೈ ವ್ಯಾರಾವಾಲ

ಟಿ.ಎಸ್. ಸತ್ಯನ್

ಹೊಮೈ ವ್ಯಾರಾವಾಲ ಅವರಿಗೆ ಈಗ ತೊಂಬತ್ತು ವರ್ಷ ವಯಸ್ಸು, ಭಾರತದ ಪ್ರಪಥಮ ಮಹಿಳಾ ಪೋಟೋ ಪತ್ರಿಕೋದ್ಯಮಿ ಅವರು. ನನ್ನ ವೃತ್ತಿಬಾಂಧವರು, ಗುಜರಾತಿನಲ್ಲಿರುವ ಅವರಿಂದ ಕೆಲವು ತಿಂಗಳುಗಳ ಹಿಂದೆ ನನಗೊಂದು ಕಾಗದ ಬಂತು. ಬೊಂಬಾಯಿ, ದೆಹಲಿ ಮತ್ತು ಪಿಲಾನಿಗಳಲ್ಲಿ ಇದ್ದ ಅವರು 1982ರಿಂದ ವಡೋದರ (ಬರೋಡ)ದ ಹೊರ ಬಾಗದ ಒಂದು ಸಾಮಾನ್ಯವಾದ ಅಪಾರ್ಟ್‌ಮೆಂಟಿನಲ್ಲಿದ್ದಾರೆ.

ಹೊಸ ಅವಕಾಶಗಳನ್ನು ಹುಡುಕಿಕೊಂಡು 1957ರಲ್ಲಿ ನಾನು ದೆಹಲಿಗೆ ಹೋದಾಗ ಅಲ್ಲಿ ನನಗೆ ಅವರ ಪರಿಚಯವಾಯಿತು. 44 ವರ್ಷ ವಯಸ್ಸಿನ ಆಕೆಯ ನಡೆ ನುಡಿ ನನಗೆ ತುಂಬಾ ಇಷ್ಟವಾದವು. ಪಾದರಸದಂತೆ ಚುರುಕಾಗಿ ಓಡಾಡುತ್ತಿದ್ದ ಆಕೆ ಗಂಭೀರ ಸ್ವಭಾವದರಾಗಿದ್ದು ಒಳ್ಳೆಯ ಹಾಸ್ಯಪ್ರವೃತ್ತಿಯನ್ನು ಮೈಗೂಡಿಸಿಕೊಂಡಿದ್ದರು. ಆ ವೇಳೆಗಾಗಲೇ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದ ಎಲ್ಲ ನಾಯಕರ ಪರಿಚಯವೂ ಆಕೆಗಿತ್ತು. ಅಷ್ಟೇ ಅಲ್ಲ. ಅವರೆಲ್ಲರ ಛಾಯಚಿತ್ರಗಳನ್ನೂ ಆಕೆ ತೆಗೆದಿದ್ದರು.

"ನಿಮ್ಮ ಆರೋಗ್ಯ ಹೇಗಿದೆ? ಹೇಗೆ ಸಮಯ ಕಳೆಯುತ್ತಿದ್ದೀರಿ?" ಎಂದೆಲ್ಲ ಕೇಳಿ ನಾನು ಬರೆದಿದ್ದ ಕಾಗದಕ್ಕೆ ಆಕೆ ಉತ್ತರ ಬರೆದಿದ್ದರು: "ಕಳೆಯುವುದಕ್ಕೆ ಕಾಲ ಎಲ್ಲಿದೆ? ಮನೆ ಕೆಲಸವೇ ಬೇಕಾಷ್ಟಿರುತ್ತದೆ. ತೋಟಗಾರಿಕೆ, ಮರಗೆಲಸ ಮುಂತಾದ ಎಷ್ಟೋ ಹವ್ಯಾಸಗಳು ಬೇರೆ ಇವೆಯಲ್ಲ!" ಅವರಿಗೆ ಪರಿಚಯವಾಗಿದ್ದ ಹುಡುಗಿಯೊಬ್ಬಳು ಕೇಳಿದಳಂತೆ: "ಈ ವಯಸ್ಸಿನಲ್ಲಿ ಇಷ್ಟು ಆರೋಗ್ಯವಾಗಿದ್ದು, ಇಷ್ಟು ಕೆಲಸ ಮಾಡುತ್ತೀರಲ್ಲ– ಅದು ಹೇಗೆ? ವ್ಯಾಯಾಮ ಮಾಡುತ್ತೀರೇನು?" "ಹೌದು" ಎಂದರಂತೆ ಇವರು "ಪ್ರತಿದಿನ ನನಗೆ ಬೆಳಗಾಗುವುದೇ ಪೊರಕೆಯ ಜೊತೆ."

"ಜೀವನದ ವಿಷಯದಲ್ಲಿ ಗೊಣಗುವಂಥದೇ ಏನೂ ಇಲ್ಲ" ಎಂದರು ಆಕೆ "ಒಳ್ಳೆ ಆರೋಗ್ಯ ಇತ್ತು ವೃತ್ತಿಯೂ ತೃಪ್ತಿ ನೀಡಿದೆ. ತುಂಬಾ ಪ್ರೀತಿಸುತ್ತಿದ್ದ ಗಂಡ, ಸೊಗಸಾದ ಮಗ. ಇಲ್ಲಿ ನಡೆಯುತ್ತಿರುವ ಭಯಂಕರ ಘಟನೆಗಳನ್ನು ನೋಡೋದಕ್ಕೆ ಈಗ ಅವರು ಇಲ್ಲಿಲ್ಲ. ಮಾನವ ಮಾನವನ ವಿಷಯದಲ್ಲಿ ಎಷ್ಟು ಅಮಾನವಿಯವಾಗಿ ನಡೆದುಕೊಳ್ಳುತ್ತಿದ್ದಾನೆ ! ದಂಗೆ, ಲೂಟಿ, ಬೆಂಕಿ, ಕೊಲೆ – ಇವನ್ನೆಲ್ಲಾ ನೋಡಿ ನನ್ನ ಕಣ್ಣಿಂದ ರಕ್ತ ಸುರಿಯುತ್ತಿದೆ. ಹಿಂದೆ ಸುಖವಾಗಿ ಬದುಕಿದೆವಲ್ಲ, ಅದೇ ನಮ್ಮ ಪುಣ್ಯ." ಗುಜರಾತಿನ ಗೋಧ್ರಾದ ಕೊಲೆಗಳನ್ನು, ಅನಂತರದ ಅಡೆತಡೆಯಿಲ್ಲದ ಹಿಂಸಾಕೃತ್ಯಗಳನ್ನು ಕಂಡು ಆಕೆಯ ಹೃದಯ ನುಚ್ಚುನೂರಾಗಿದ್ದು ಸಹಜವೇ ಆಗಿತ್ತು.

ಈ ತಲೆಮಾರಿನ ಅನೇಕ ಪೋಟೋಗ್ರಾಫರ್‌ಗಳಿಗೆ ವ್ಯಾರಾವಾಲ ಗೊತ್ತಿಲ್ಲ : ಆಕೆಯ ಹೆಸರನ್ನೂ ಅವರು ಕೇಳಿಲ್ಲ. 1940ರಷ್ಟು ಹಿಂದೆಯೇ ಪುರುಷ ಸ್ವಾಮ್ಯದ್ದಾಗಿದ್ದ ಪೋಟೋ ಪತ್ರಿಕೋಧ್ಯಮದ ಕ್ಷೇತ್ರವನ್ನು, ಆಕೆ ಪ್ರವೇಶಿಸಿದ್ದರು. ದೆಹಲಿಯಲ್ಲಿ ನೆಲೆಸಿದ ಆಕೆ ಭಾರತದ ಇತಿಹಾಸದ ಅನೇಕ ಮುಖ್ಯ ಘಟನೆಗಳನ್ನು ಕ್ಯಾಮರಾದಿಂದ ದಾಖಲಿಸಿ ಆ ಕ್ಷೇತ್ರದಲ್ಲಿ ಹೊಸ ಹಾದಿಯೊಂದನ್ನು ತೆರೆದಿದ್ದರು. 1940ರಲ್ಲಿ ಆಕೆ ಅಲ್ಲಿಗೆ ತಮ್ಮ ಗಂಡ ಮತ್ತು ಮಗುವಿನೊಂದಿಗೆ ಬಂದಿದ್ದರು.

ಬೊಂಬಾಯಿ ವಿಶ್ವವಿದ್ಯಾಲ್ಯದಲ್ಲಿ ಅರ್ಥಶಾಸ್ತ್ರ ಅಧ್ಯಯನ ಮಾಡಿ ಬಿ.ಎ. ಆನರ್ಸ್ ಪದವಿಯನ್ನೂ, ಜೆ.ಜೆ. ಕಲಾಶಾಲೆಯಲ್ಲಿ ಡಿಪ್ಲೋಮಾವನ್ನು ಪಡೆದಿದ್ದ ವ್ಯಾರಾವಾಲ ಪೋಟೋ ಪತ್ರಿಕೋದ್ಯಮವನ್ನು ವೃತ್ತಿಯಾಗಿ ಆರಿಸಿ ಕೊಂಡಿದ್ದರು. ಸ್ವತಂತ್ರ ಪೋಟೋ ಪತ್ರಕರ್ತೆಯಾಗಿ ಕೆಲಸ ಮಾಡುವುದರ ಜೊತೆಗೆ ಗಂಡ ಮನೇಕ್ ಷಾ ವ್ಯಾರಾವಾಲ ಅವರೊಂದಿಗೆ ದೆಹಲಿಯ ಬ್ರಿಟಿಷ್ ವಾರ್ತಾ ಇಲಾಖೆಯಲ್ಲಿ ಪೋಟೋ ಗ್ರಾಫರ್ ಆಗಿ ಉದ್ಯೋಗವನ್ನೂ ಮಾಡುತ್ತಿದ್ದರು. 1970ರಲ್ಲಿ ಗಂಡ ತೀರಿಕೊಂಡರು. ಆಗ ಮಗನ ಜೊತೆ ಇರಲು ಹೋದರು. ಆತ ಕೆಮಿಕಲ್ ಎಂಜಿನಿಯರ್ ಆಗಿ ಮೊದಲು ಪಿಲಾನಿಯಲ್ಲಿ, ಆಮೇಲೆ ವಡೋದರಾದಲ್ಲಿ ಕೆಲಸ ಮಾಡುತ್ತಿದ್ದ. ದುರದೃಷ್ಟ ಎಂದರೆ, 46 ವರ್ಷದ ಆತ ಕ್ಯಾನ್ಸರ್ ಆಗಿ ತೀರಿಕೊಂಡ. ಆಕೆ ವಡೋದರಾದಲ್ಲೇ ಉಳಿದುಕೊಂಡರು.

ನನಗೆ ಸ್ಪೂರ್ತಿ ನೀಡಿದ್ದು ಎಂದರೆ ಆಕೆಯ ಶಾಂತಚಿತ್ತ. ಉದಾರ ಹೃದಯದ ಆಧೀರ ವೈಯಕ್ತಿಕ ದುರಂತಗಳು ತನ್ನ ಚಿತ್ತಸ್ಥೈರ್ಯವನ್ನು ಕಲಕಲು ಬಿಡಲಿಲ್ಲ. ತಮ್ಮ ಕಾಗದಲ್ಲಿ ಅವರು ಬರೆದಿದ್ದ ಮಾತುಗಳು ಅವರ ಧೀರ ಪ್ರವೃತ್ತಿಗೆ ಸಾಕ್ಷಿ ಹೇಳುತ್ತದೆ.

ದೆಹಲಿಯಲ್ಲಿ ಆಗ ನಾವು ಎಂಟು ಹತ್ತು ಜನ ಪೋಟೋ ಗ್ರಾಫರುಗಳು ಇದ್ದೆವು. ನಮ್ಮ ನಡುವೆ ಇದ್ದ ಏಕೈಕ ಮಹಿಳಾ ಪೋಟೋಗ್ರಾಫರ್ ಆಕೆ. ಅವಳ ಪ್ರೀತಿ. ಪೋಟೋಗ್ರಫಿಯಲ್ಲಿ ಆಕೆಗಿದ್ದ ಗಾಢಪ್ರೇಮ, ಅವಳು ಕಷ್ಟಪಟ್ಟು ದುಡಿಯುತ್ತಿದ್ದ ರೀತಿ, ಪಾರದರ್ಶಕವಾಗಿದ್ದ ಸದ್ಗುಣಗಳು, ಇವುಗಳಿಂದ ನಮ್ಮೆಲ್ಲರ ಪ್ರೀತಿ ವಿಶ್ವಾಸಗಳನ್ನು ಆಕೆ ಗಳಿಸಿಕೊಂಡಿದ್ದರು. ನಮಗೆಲ್ಲ ಆಕೆಯಲ್ಲಿ ಎಂಥ ಆದರ ಅಂದರೆ, ಅವರನ್ನು 'ಅಮ್ಮ' ಎಂದು ಕರೆಯುತ್ತಿದ್ದೆವು.

ಆಕೆಯು ತೆಗೆದ ಮೊದಲ ಚಿತ್ರಗಳು ಪ್ರಕಟವಾದದ್ದು 'ಬಾಂಬೆ ಕ್ರಾನಿಕಲ್' ಪತ್ರಿಕೆಯಲ್ಲಿ. "ಪತ್ರಿಕೆಯ ಒಂದು ಇಡೀ ಪುಟದ ತುಂಬ ನನ್ನ ಚಿತ್ರಗಳನ್ನು ಆ ಪತ್ರಿಕೆಯವರು ಪ್ರಕಟಿಸಿದರು. ಪ್ರತಿ ಚಿತ್ರಕ್ಕೂ ಒಂದೊಂದು ರೂಪಾಯಿ ಕೊಟ್ಟರು ! ಆ ಕಾಲದಲ್ಲಿ ಒಂದು ರೂಪಾಯಿ ಎಂದರೆ ದೊಡ್ಡ ಮೊತ್ತ" ಎಂದು ಆಕೆ ನೆನಪು ಮಾಡಿಕೊಳ್ಳುತ್ತಾರೆ. 'ಇಲಸ್ಟ್ರೇಟೆಡ್ ವೀಕ್ಲಿ' ಪತ್ರಿಕೆಗೆ ಸ್ವತಂತ್ರ ಪೋಟೋಗ್ರಾಫರ್

ಆಗಿ ಆಕೆ ಕೆಲಸ ಶುರು ಮಾಡಿದರು. ಹೆಚ್ಚು ಕಡಿಮೆ ಅದೇ ಸಮಯದಲ್ಲಿ ಮೈಸೂರಿನಲ್ಲಿದ್ದು ನಾನು ಮಾಡುತ್ತಿದ್ದುದೂ ಅದನ್ನೇ. ಆಗಷ್ಟೇ ಅರಳುತ್ತಿದ್ದ ಅನೇಕ ಫೋಟೋ ಪ್ರತಿಭೆಗಳಿಗೆ ಪೋಷಕರಾಗಿದ್ದ ಸಂಪಾದಕ ಸ್ಟ್ಯಾನ್ಲಿ ಜೆಪ್ಸನ್ ಅವರು ನಮ್ಮಿಬ್ಬರನ್ನೂ ತುಂಬಾ ಪ್ರೋತ್ಸಾಹಿಸಿದರು.

ಸ್ವಾತಂತ್ರ್ಯ ಪೂರ್ವ ಭಾರತದಲ್ಲಿ ವೈವಿಧ್ಯಪೂರ್ಣವಾದ ಕೆಲಸಗಳನ್ನು ಮಾಡಿ ಅನುಭವ ಪಡೆದಿದ್ದ ಆಕೆ ಇತಿಹಾಸವನ್ನು ತನ್ನ ಚಿತ್ರಗಳಲ್ಲಿ ದಾಖಲುಗೊಳಿಸಿದ್ದರು. ಅದರಲ್ಲಿ ಅಸಂಖ್ಯಾತ ರಾಜಕೀಯ ಕಿರುಪ್ರಸಂಗಗಳಿಂದ ಹಿಡಿದು ಮುಖಂಡರನೇಕರ ವಿವಿಧ ಮುಖಗಳೂ ಸೇರಿದ್ದುವು. ಕಳೆದ ಕಾಲದ ಮಹಾನ್ ನಾಯಕರಿಗೆ ಸಂಬಂಧಿಸಿದ ಪ್ರಮುಖ ಘಟನೆಗಳನ್ನು ಆಕೆ ಚಿತ್ರಿಕರಿಸಿದ್ದರು. ಮಹಾತ್ಮ ಗಾಂಧಿ, ಜವಹರಲಾಲ್ ನೆಹರು, ಖಾನ್ ಅಬ್ದುಲ್ ಗಫಾರ್ ಖಾನ್, ರಾಜೇಂದ್ರ ಪ್ರಸಾಧ್, ಆಚಾರ್ಯ ಕೃಪಲಾನೊ, ಸರದಾರ್ ಪಟೇಲ್, ರಾಜ ಗೋಪಾಲಾಚಾರಿ, ಲಾಲ್ ಬಹದ್ದೂರ್ ಶಾಸ್ತ್ರಿ, ಸರ್ವೆನಲ್ಲಿ ರಾಧಾಕೃಷ್ಣನ್ ಮುಂತಾದವರ ಚಿತ್ರಗಳನ್ನು ತೆಗೆದಿದ್ದದ್ದು ಮಾತ್ರವಲ್ಲ, ಆಕೆಗೆ ಅವರೆಲ್ಲರೂ ಪರಿಚಿತರೇ ಆಗಿದ್ದರು.

ವೈಸ್‌ರಾಯ್‌ಗಳಾಗಿದ್ದ ಲಾರ್ಡ್ ವೇವಲ್ ಮತ್ತು ಲಾರ್ಡ್ ಮೌಂಟ್‌ಬೇಟನ್ ಅವರ ಕಾಲದಲ್ಲಿ ನಡೆದ ಅಧಿಕೃತ ಸಮಾರಂಭಗಳ ಫೋಟೋಗಳನ್ನು ಆಕೆ ತೆಗೆದಿದ್ದರು. ಅಲ್ಲದೆ ಕನಾಟ್ ಪ್ಲೇಸ್‌ನಲ್ಲಿದ್ದ ತನ್ನ ಅಪಾರ್ಟ್‌ಮೆಂಟಿನ ಮೊಗಸಾಲೆ ಯಿಂದಲೇ ಮಿತ್ರಪಕ್ಷಗಳು ನಡೆಸಿದ ಮೆರವಣಿಗೆಯನ್ನು ಚಿತ್ರೀಕರಿಸಿದ್ದರು. ಜೊತೆಗೆ ಭಾರತ ವಿಭಜನೆ ಮತ್ತು ಸ್ವಾತಂತ್ರ್ಯ, ಇವುಗಳನ್ನು ಚರ್ಚಿಸಿದ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಭೆಯ ಕಲಾಪಗಳನ್ನು ಆಕೆ ಚಿತ್ರೀಕರಿಸಿದ್ದರು. ಆಚಾರ್ಯ ಕೃಪಲಾನಿ ಅಧ್ಯಕ್ಷತೆ ವಹಿಸಿದ್ದ ಆ ಸಭೆಯಲ್ಲಿ ಗಾಂಧೀಜಿ ಮತ್ತು ಅಬ್ದುಲ್ಲ ಗಫಾರ್ ಖಾನ್ ಹಾಜರಿದ್ದರು. ವ್ಯಾರಾವಾಲ ಬರೆದಿದ್ದಾರೆ: "ಅದೊಂದು ಸಣ್ಣ ಹಾಲ್. ನಾವು ತುಂಬ ಕಷ್ಟಪಟ್ಟು ಫೋಟೋ ತೆಗೆಯಬೇಕಾಗಿತ್ತು. ಕೆಲವೇ ಕೆಲವರು ಪತ್ರಿಕಾ ಪ್ರತಿನಿಧಿಗಳಿದ್ದರು. ನಾನೂ ಸೇರಿದಂತೆ ಇಬ್ಬರೇ ಫೋಟೋಗ್ರಾಫರ್‌ಗಳು".

ಭಾರತಕ್ಕೆ ಸ್ವಾತಂತ್ರ್ಯ ಬಂದ ಕೂಡಲೇ ದೆಹಲಿಯಲ್ಲಿ ಉಕ್ಕಿ ಹರಿದ ಜನೋತ್ಸಾಹವನ್ನೂ ವ್ಯಾರಾವಾಲ ಚಿತ್ರಗಳಲ್ಲಿ ದಾಖಲಿಸಿದ್ದಾರೆ. "ಅದಾದ ಕೂಡಲೇ ನಡೆದ ದಂಗೆಯ ಚಿತ್ರಗಳನ್ನು ತೆಗೆಯಲಾಗಲಿಲ್ಲ; ಏಕೆಂದರೆ ನಾವು ನಮ್ಮ ನಮ್ಮ ಮನೆಗಳನ್ನು ಉಳಿಸಿಕೊಳ್ಳಬೇಕಾಗಿತ್ತು. ನಾವಿದ್ದ ಮನೆ ಮುಸಲ್ಮಾನರದ್ದು, ದಂಗೆಕೋರರು ಅದನ್ನು ಲೂಟಿ ಮಾಡಿ ಸುಟ್ಟು ಹಾಕಬೇಕೆಂದಿದ್ದರು. ನನ್ನ ತಾಯಿ, ನನ್ನ ಮಗ ಅಲ್ಲಿದ್ದರು. ಹೀಗಾಗಿ ನಾನಾಗಲಿ ನನ್ನ ಗಂಡನಾಗಲಿ ಮನೆಯಲ್ಲಿ ಇರಲೇಬೇಕಾಗಿತ್ತು".

ನಾನು ಹೊಮೈ ವ್ಯಾರಾವಾಲ ಅವರ ಜೊತೆ ದೆಹಲಿಯಲ್ಲಿ 1970 ರವರೆಗೆ ಸುಮಾರು 13 ವರ್ಷಗಳ ಕಾಲ ಕೆಲಸ ಮಾಡಿದೆ. ಆಗ ಅವರು ಪಿಲಾನಿಯಲ್ಲಿದ್ದ ತಮ್ಮ ಮಗನ ಜೊತೆ ಇರಲು ಹೋದರು. ಭಾರತದ ಇತಿಹಾಸವನ್ನು ಸೃಷ್ಟಿಸಿದ ಮಹಾನ್ ನಾಯಕರೊಂದಿಗೆ ಆಕೆ ಸಾಧಿಸಿದ್ದ ಆತ್ಮೀಯತೆ ನನ್ನನ್ನು ಇಂದಿಗೂ ಬೆರಗುಗೊಳಿಸುತ್ತಿದೆ.

ಒಂದು ದಿನ ರಾಷ್ಟ್ರಪತಿ ಭವನದಲ್ಲಿ ನಡೆದ ಒಂದು ಸಮಾರಂಭವನ್ನು ಚಿತ್ರೀಕರಿಸಲು ಹೋಗುವ ಸ್ವಲ್ಪ ಮುಂಚೆ ವ್ಯಾರಾವಾಲ ಬಿದ್ದು ತುಟಿಯನ್ನು ಗಾಯ ಮಾಡಿಕೊಂಡಿದ್ದರು. ವೇದಿಕೆಯಲ್ಲಿದ್ದ ಡಾ. ರಾಧಾಕೃಷ್ಣನ್ ಆಕೆಯ ಮೇಲ್ತುಟಿಗೆ ವೈದ್ಯರು ಹಾಕಿದ್ದ ಪ್ಲಾಸ್ಟರನ್ನು ಗಮನಿಸಿದರು. ದೂರದಿಂದಲೇ ಅವರು ವ್ಯಾರಾವಾಲರ ಗಮನವನ್ನು ಸೆಳೆಯಲು ತಮ್ಮ ತೋರು ಬೆರಳಿಂದ ತಮ್ಮ ಮೇಲ್ತುಟಿಯನ್ನು ಉಜ್ಜಿಕೊಂಡರು. ಆಮೇಲೆ ಅತಿಥಿಗಳೊಡನೆ ಓಡಾಡುತ್ತಿದ್ದಾಗ ರಾಧಾಕೃಷ್ಣನ್ ಆಕೆಯ ಕಿವಿಯಲ;ಲಿ ಪಿಸುಗುಟ್ಟಿದರು. "ನಿಮ್ಮ ಗಂಡ ನಿಮ್ಮನ್ನು ಕಚ್ಚಿದರು?" ರಾಷ್ಟ್ರಾಧ್ಯಕ್ಷರು ಆಕೆಯನ್ನು "ರಾಜಕುಮಾರಿ" ಎಂದು ಕರೆಯುತ್ತಿದ್ದರು. "ನನ್ನನ್ನೇಕೆ ರಾಜಕುಮಾರಿ ಎಂದು ಕರೆಯುತ್ತೀರಿ?" ಎಂದು ಆಕೆ ಕೇಳಿದ್ದಕ್ಕೆ ಅವರ ಉತ್ತರ "ನೀವು ರಾಜರ ಚಿತ್ರ ತೆಗೆಯುತ್ತೀರಲ್ಲ. ಅದಕ್ಕೆ, ನಿಮ್ಮನ್ನು ಇನ್ನೇನೆಂದು ಕರೆಯಲಿ?"

ನಾವೆಲ್ಲ ದೆಹಲಿಯಲ್ಲಿ ಕಳೆದ ದಿನಗಳನ್ನು ನೆನಪು ಮಾಡಿಕೊಳ್ಳುತ್ತಾ ಆಕೆ ಹೇಳುತ್ತಾರೆ. "ಬದುಕು ಹಿತಕರವಾಗಿತ್ತು. ಆಗ ಎಷ್ಟು ತಮಾಷೆ, ಏನು ಕತೆ ! ಕೆಲಸದ ಮೇಲಿದ್ದಾಗ ನಮ್ಮಲ್ಲಿ ತುಂಬ ಆತ್ಮೀಯತೆ ಇತ್ತು. ನಾವೆಲ್ಲ ಒಂದು ಎಂಬ ಭಾವನೆ ಬೆಳೆದಿತ್ತು.

ಪ್ರತಿ ವರ್ಷವೂ ಇಂದಿರಾ ಗಾಂಧಿಯವರನ್ನು ತಲೆಯನ್ನು ಹೀಗೆ ತಿರುಗಿಸಿ, ಹಾಗೆ ತಿರುಗಿಸಿ ಎಂದು ಕಿರುಚುತ್ತಿದ್ದಾಗ ಅವರಿಗೆ ತುಂಬ ಮುಜುಗರ ಆಗುತ್ತಿತ್ತು. ನಮ್ಮನ್ನೆಲ್ಲ ಹತೋಟಿಯಲ್ಲಿಡುವುದು 'ಅಮ್ಮ'ನ ಕೆಲಸವಾಗಿತ್ತು. ಆಕೆ ನಮ್ಮ ಕ್ಯಾಪ್ಟನ್ ! ಪ್ರಧಾನಿಯವರಿಗೆ ಅದು ಗೊತ್ತಿತ್ತು.

ಮುಖ್ಯಾತಿಮುಖ್ಯರನ್ನೂ ಅಂದಿನ ದಿನಗಳಲ್ಲಿ ನಾವು ಸುಲಭವಾಗಿ ಭೇಟಿಮಾಡಬಹುದಾಗಿತ್ತು. ಅಂದು ನಮಗಿದ್ದ ಸೌಲಭ್ಯಗಳನ್ನು ಇಂದು ಊಹಿಸುವುದೂ ಅಸಾಧ್ಯ. ಈಗ ರಕ್ಷಣಾ ವ್ಯವಸ್ಥೆ ಹಾಗೂ ಫೋಟೋಗ್ರಾಫರ್‌ಗಳ ಸಂಖ್ಯೆಯಿಂದಾಗಿ ಆ ಸೌಲಭ್ಯ ಸಾಧ್ಯವಿಲ್ಲದ್ದು. ಭಾರತ ಸ್ವತಂತ್ರವಾದ ತರುಣದಲ್ಲಿ ಎಷ್ಟೊಂದು ದೇಶಗಳಿಂದ ಅವುಗಳ ಅಧ್ಯಕ್ಷರೂ ಪ್ರಧಾನಿಗಳೂ ಗುಂಪುಗುಂಪಾಗಿ ದೆಹಲಿಯಲ್ಲಿ ಪ್ರತ್ಯಕ್ಷರಾಗುತ್ತಿದ್ದರು ಎಂಬುದು ನನಗೆ ಈಗಲೂ ನೆನಪಿನಲ್ಲಿದೆ. ಅವರ ಗೌರವಾರ್ಥ ರಾಷ್ಟ್ರಪತಿ ಭವನದಲ್ಲಿ ಭೋಜನಕೂಟಗಳು ಏರ್ಪಾಟಾಗಿರುತ್ತಿದ್ದುವು. ನಾವು ಭೋಜನದ ಹಾಲಿಗೆ ಸೇರಿದ ಕೋಣೆಯಲ್ಲಿ ಕುಳಿತು ವ್ಯಾರಾವಾಲ ಅವರೊಂದಿಗೆ ಹರಟುತ್ತ ನಗುತ್ತ ಇದ್ದು,

ಸ್ವಸ್ತಿ ಭಾಷಣದ ಸಮಯ ಬರುವವರೆಗೂ ಕಾಯುತ್ತಿದ್ದವು. ಸೂಚನೆ ಸಿಕ್ಕುತ್ತಲೇ ನಾವು ಓಡುತ್ತಾ ಮೆಟ್ಟಲು ಹತ್ತಿ, ಬಾಲ್ಕನಿ ಸೇರಿ, ಅಲ್ಲಿ ನಿಂತು ಫೋಟೋ ತೆಗೆಯುತ್ತಿದ್ದವು.

ಈಗ ಫೋಟೋಗ್ರಾಫರ್‌ಗಳು ಬಿಗಿಯಾಗಿ ಜೀನ್ಸ್ ಮತ್ತು ಬುಷ್ ಶರ್ಟ್‌ಗಳಲ್ಲೇ ರಾಷ್ಟ್ರಪತಿ ಭವನಕ್ಕೆ ಹೋಗುತ್ತಾರೆ. ಆಗೆಲ್ಲ. ನಾವೆಲ್ಲ ಪ್ಯಾಂಟು, ಷೂ, ಮುಚ್ಚುಕಾಲರಿನ ಕೋಟು ಧರಿಸಿ ಠೀಕಾಗಿ ಹೋಗಬೇಕಾದದ್ದು ಕಡ್ಡಾಯವಾಗಿತ್ತು. ವ್ಯಾರಾವಾಲ, ಸೈಕಲ್ ಸವಾರಿಗೆ ಅನುಕೂಲವಾಗಿರಲಿ ಎಂದು ಕುರ್ತ ಪೈಜಾಮ ಧರಿಸುತ್ತಿದ್ದವರು, ರಾಷ್ಟ್ರಪತಿ ಭವನಕ್ಕೆ ಸೀರೆ ಉಟ್ಟು ಬರುತ್ತಿದ್ದರು.

ನಮ್ಮ ದೇಶದ ಪ್ರಥಮ ಮಹಿಳಾ ಫೋಟೋ ಪತ್ರಕರ್ತೆಗೆ ಇಂದಿನ ಪತ್ರಿಕೆಗಳಲ್ಲಿ ಅಚ್ಚಾಗಿ ಬರುವ ಚಿತ್ರಗಳ ವಿಷಯದಲ್ಲಿ ಕಟುವಾದ ಭಾವನೆಗಳಿವೆ: "ಇಂದಿನ ಫೋಟೋ ಪತ್ರಿಕಾ ಕ್ಷೇತ್ರದಲ್ಲಿ ನಗ್ನತೆಯನ್ನು ತುರುಕುವ ಪ್ರವೃತ್ತಿ ನನಗೆ ಅಸಹ್ಯಕರವಾಗಿ ಕಾಣುತ್ತಿದೆ. ಮಹಿಳೆಯರು ಸಾಕಷ್ಟು ಬಟ್ಟೆ ಹಾಕಿಕೊಳ್ಳದ ಇಲ್ಲವೆ ನಗ್ನರಾಗಿರುವ ಚಿತ್ರಗಳನ್ನು ಪ್ರದರ್ಶಿಸುವ ಚಟ ನಿಯತ ಕಾಲಿಕೆಗಳನ್ನು ಪ್ರಕಟಿಸುವವರಿಗೆ. ವಾಸ್ತವವಾಗಿ ಆ ಹೆಂಗಸರು ಧರಿಸುವ ಬಟ್ಟೆಗಳಿಗಿಂತ ಒಂದು ಅಂಜೂರದ ಗಿಡದ ಎಲೆಯಲ್ಲಿ ಅವರ ದೇಹಗಳನ್ನು ಮುಚ್ಚಿಕೊಂಡಿದ್ದರೆ ಹೆಚ್ಚು ಸಭ್ಯತೆ ಇರುತ್ತಿತ್ತು!.

"ಅದೇ ಹಳಸಲು ಫೋಟೋಗಳನ್ನು ತೆಗೆಯುವ ಬದಲು ಬೇರೆ ಬೇರೆ ವಿಷಯಗಳ ಚಿತ್ರ ತೆಗೆದಿದ್ದರೆ ಚೆನ್ನಾಗಿತ್ತು" ಎನ್ನುತ್ತಾರೆ ಆಕೆ. ತಮ್ಮ ವೃತ್ತಿ ಜೀವನದ ದಿನಗಳಲ್ಲಿ ತಾವು ಚಿತ್ರೀಕರಿಸಿದ ಮಹಾನ್ ಪುರುಷರನ್ನು, ಮಹಿಳೆಯರನ್ನು ನೆನಪು ಮಾಡಿಕೊಳ್ಳುತ್ತಾ ಅವರು ಹೇಳುತ್ತಾರೆ. "ಅವರೆಲ್ಲ ನಾಯಕರಾಗಿದ್ದರು, ರಾಜಕಾರಣಿಗಳಾಗಿರಲಿಲ್ಲ. ಆ ದೊಡ್ಡವರದ್ದೇ ಬೇರೆ ಒಂದು ವರ್ಗ, ಭ್ರಷ್ಟಾಚಾರದ ಪರಿಚಯವೇ ಅವರಿಗೆ ಇರಲಿಲ್ಲ, ಅವರು ಪ್ರಚಾರವನ್ನು ಬಯಸುತ್ತಿರಲಿಲ್ಲ. ಅದು ತಾನಾಗಿಯೇ ಅವರಿಗೆ ದೊರೆಯುತ್ತಿತ್ತು.

ಫೋಟೋ ಪತ್ರಕರ್ತರಾಗುವವರಿಗೆ ಅವರು ಹೇಳುವ ಕಿವಿಮಾತಿದು: "ಸತ್ಯವಂತರಾಗಿರಿ. ಕೋಲಾಹಾರ ಎಬ್ಬಿಸಲಿಕ್ಕಾಗಿ ಏನನ್ನೋ ಸೃಷ್ಟಿ ಮಾಡಬೇಡಿ. ಪ್ರಾಮಾಣಿಕ ರಾಗಿರಿ. ಮಾನವತೆಯ ಗಾಂಭೀರ್ಯವನ್ನು ಅರ್ಥಮಾಡಿ ಕೊಳ್ಳಿ. ನೀವು ಯಾರ ಚಿತ್ರ ತೆಗೆಯುತ್ತೀರೋ ಅವರಿಗೆ ನೋವಾಗುವಂತಹ, ಅವರನ್ನು ಕೀಳಾಗಿಸುವಂಥ ಚಿತ್ರಗಳನ್ನು ತೆಗೆಯಬೇಡಿ. ಮಾನವ ಮರ್ಯಾದೆಗೆ ವಿರೋಧವಾದುದನ್ನು ಮಾಡುವ ಅಧಿಕಾರ ಯಾವ ಫೋಟೋಗ್ರಾಫರನಿಗೂ ಇಲ್ಲ. ಖಾಸಗೀಯತೆ ಎನ್ನುವುದು ವೈಯಕ್ತಿಕ ಹಕ್ಕು"

ಫೋಟೋ ಪತ್ರಕರ್ತರಾಗಬಯಸುವ ಮಹಿಳೆಯರಿಗೂ ಅವರ ಸಲಹೆ ಉಂಟು: "ನಿಮ್ಮ ಕುಟುಂಬವನ್ನು ಅಲಕ್ಷಿಸಬೇಡಿ. ದುರದೃಷ್ಟವಶಾತ್ ಇಂದಿನ ದಿನಗಳಲ್ಲಿ ಮಿಂಚಿಕೊಳ್ಳುವ ಒಂದು ಪ್ರವೃತ್ತಿಯಿದೆ. "ಓ ! ನನಗೆ ಮನೆಗೆಲಸಕ್ಕೆ ಪುರಸೊತ್ತೇ ಇಲ್ಲ' ಎನ್ನುವುದು ಮಾಮೂ ಲಾಗಿದೆ. ಇಪ್ಪತ್ತನಾಲ್ಕು ಗಂಟೆಗಳನ್ನು ವಿವೇಕಪೂರ್ಣವಾಗಿ ಹಂಚಿದರೆ ಬೇಕಾದಷ್ಟು ಕೆಲಸ ಮಾಡ ಬಹುದು. ಕುಟುಂಬ, ವೃತ್ತಿ ಎರಡಕ್ಕೂ ನ್ಯಾಯ ದೊರಕಿಸಬಹುದು.

ಹೊಮ್ಮೆ ವ್ಯಾರಾಲಾಲ ಸರಿಸಾಟಿಯಿಲ್ಲದ ಫೋಟೋಗ್ರಾಫರ್ ಮಾತ್ರ ಅಲ ; ಆಕೆ ಸರಿಸಾಟಿಯಿಲ್ಲದ ಚಾರಿತ್ರ್ಯ ಶೀಲೆಯೂ ಹೌದು.

ಶ್ರೀ ಟಿ.ಎಸ್. ಸತ್ಯನ್‌ರವರ 'ಕಾಲಕ್ಕೆ ಕನ್ನಡಿ' ಕೃತಿಯಿಂದ ಆಯ್ದ ಲೇಖನ.

ಬರೆವ ಸಖಿ – ಈ ಹಾಡು ನಿನಗಾಗಿ

॥ಪಲ್ಲವಿ॥

ಹೂವಿನ ಮೊಗದಲಿ ಚೆಲುವಿನ ಕವಿತೆಯ
ಬರೆದವಳ್ಯಾರು ಹೇಳೆ ಸಖಿ
ಮಗುವಿನ ನಗೆಯಲಿ ಒಲವಿನ ಕವಿತೆಯ
ಬರೆದವಳ್ಯಾರು ಹೇಳೆ ಸಖಿ ॥ಹೂವಿನ.....॥

॥ಚರಣ॥

ನೋವಿನ ಹೂವನೆ ಪೋಣಿಸಿ ಪೋಣಿಸಿ
ನಗುತಿಹ ಗೀತವ ಕಟ್ಟಿದಳು
ಸೃಷ್ಟಿಯ ತೊಟ್ಟಿಲು ತೂಗುವ ಕೈಯಲೆ
ಅಮೃತ ಕಾವ್ಯವ ಬರೆದಿಹಳು ॥ ಹೂವಿನ॥

ಮೋಡದ ಸೆರಗಲಿ ಬಣ್ಣದ ಕವಿತೆಯ
ಬರೆದವಳಭಿರುಚಿ ನೋಡೆ ಸಖಿ
ವಿಶ್ವವೆ ಕವಯಿತ್ರಿ ನೀನವಳ ಪುತ್ರಿ
ಅಂಜಿಕೆ ಏತಕೆ ಬರೆಯೆ ಸಖಿ....
ನೀ ಬರೆಯೆ ಸಖಿ ॥ಹೂವಿನ॥

– ಚಿತ್ರಲೇಖಾ

CPMG/KA/BGS-8/2006-08 RNI NO.45577/88
Posted at Basavanagudi P.O. on the 25/29th of the every month
March - April 2007

ಬಯಕೆ

ನಾವು ಒಂದೇ ಮಣ್ಣಾಗಬೇಕೆಂದು
ಬಯಸುತ್ತಾರೆ ಗೆಳತಿ
ಶತಮಾನಗಳಿಂದ ಜತನದಿಂದ
ಕಾಯ್ದು ತಂದ ಸೀತೆ, ದ್ರೌಪದಿ
ಅಹಲ್ಯೆ, ಅನುಸೂಯೆಯರ
ಸಂಪ್ರದಾಯಗಳ ಆಯಕಟ್ಟಿನಲ್ಲಿ ಜೋಡಿಸಿಟ್ಟ
ಮ್ಯೂಸಿಯಂನ್ನೇ
ಮಾದರಿಯಾಗಿಟ್ಟುಕೊಂಡು
ನಮ್ಮನ್ನು ರೂಪಗೊಳಿಸಿ
ಅವರಿಗೆ ಬೇಕಾದರೆ
ಬೆಂಕಿಗೆ ಬೀಳಬೇಕೆಂದು
ವಸ್ತ್ರಾಪಹರಣಕ್ಕೆ ಒದಗಬೇಕೆಂದು
ಕಲ್ಲಾಗಿಯೇ ಉಳಿಯಬೇಕೆಂದು
ಪತಿವ್ರತೆಯರಾಗಿ ಇರಬೇಕೆಂದು

ನಾವು ಬರಿದೇ ಜಲವಾಗಬೇಕೆಂದು
ಬಯಸುತ್ತಾರೆ ಗೆಳತಿ
ಗಂಗಾ ತುಂಗಾ ಕಾವೇರಿ ಕೃಷ್ಣ
ಇತ್ಯಾದಿ ಮನಮೋಹಕ ಹೆಸರಿಟ್ಟು
ತಮ್ಮ ಪಾಪಗಳನ್ನೆಲ್ಲಾ
ನಮ್ಮಲ್ಲಿ ತೊಳೆದುಬಿಡಲು
ತಾವು ಮಾತ್ರ ಪವಿತ್ರರಾಗೇ
ಉಳಿದುಕೊಳ್ಳಲು
ಬೇಕೆಂದಾಗ ತುಂಬಿ ಹರಿದು
ಬೇಡವಾದಾಗ ಹಿಂಗಿ ಹೋಗಲೆಂದು

ನಾವು ಬರಿದೇ ಭೂಮಿಯಾಗಬೇಕೆಂದು
ಬಯಸುತ್ತಾರೆ ಗೆಳತಿ
ಉತ್ತು ಬಿತ್ತು ಬೆಳೆ ತೆಗೆಯಲು
ಮತ್ತು ಜೀವಮಾನವಿಡಿ
ಕೆಸರು ಕಾಲುಗಳಿಂದ ತುಳಿಯಲು
ಹಾಗೆಯೇ ನಮಗೆ
ಸಂಯಮವನ್ನು ಬೋಧಿಸಲು

ಲೇಖಕಿ: ಎಂ.ಎಸ್.ವೇದ

"Achala" 108, Skyline Surabhi,
14-P, Vidyapeeta Road,
BSK 3rd Stage,
Bangalore - 560 085

To :

Smt / Sri